ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಅದನ್ನೇ ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್ :- ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಬಹುದಾಗಿತ್ತು. ಇಲ್ಲದಿದ್ದರೆ ಡೀಟೈಲ್ಸ್ ಕೊಡುತ್ತೇನೆ ಎಂದು ಹೇಳಬಹುದಾಗಿತ್ತು. ಎಷ್ಟು ಕಲೆಕ್ಟ್ ಆಗಿದೆ ಎನ್ನುವಂಥದ್ದರ ಬಗ್ಗೆ ಡೀಟೈಲ್ಸ್ ಕೊಡುತ್ತೇನೆ ಎಂದು ಹೇಳಬಹುದಾಗಿತ್ತು. ಎಂಟೈರ್ ಸ್ಟೇಟ್‌ನಲ್ಲಿ ಸೆಸ್ ಕಲೆಕ್ಷನ್ ಮಾಡುವುದರಿಂದ ಅದರ ಬರ್ಡನ್ ಎಲ್ಲರ ಮೇಲಿ ಬೀಳುತ್ತದೆ ಎಂಬುದೇ ಅವರ ಕನ್‌ಟೆನ್‌ಶನ್ ಆಗಿದೆ. ಅದರ ಬಗ್ಗೆ ನೀವು ಕ್ಲಾರಿಫೈ ಮಾಡಲಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ಈ ಮಸೂದೆ ನಮ್ಮ ಸರ್ಕಾರವಿದ್ದಾಗ 1998ರಲ್ಲಿ ತಂದಂಥದ್ದು. ಅವೃತ್ತು ನಾವು ಇನ್‌ಫ್ರಾಸ್ಟ್ರಕ್ಚರ್ ಸಲುವಾಗಿ ಇದನ್ನು ತಂದಂಥ ಉದ್ದೇಶ ಏನು ಎಂದರೆ ಇದಕ್ಕೆ ಏನು corpus ಎಂದು ಬಿಲ್ಡ್‌ಅಫ್ ಆಗುತ್ತದೆ ಆ 200 ಕೋಟಿ ರೂ ಅಥವಾ 300 ಕೋಟಿ ರೂ. ಇದರ ಮೇಲೆ ನಾವು ಬಾರೋ ಮಾಡುವಂಥದ್ದು, ಟೋಟಲ್ ಡೆವಲಪ್‌ಮೆಂಟ್‌ಗೆ. Now they are extending to other places.With that intention, amendment to the Act was brought by the government.

ಇಲ್ಲಿ ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಮಾನ್ಯ ಧರ್ಮಸಿಂಗ್‌ರವರು ಇದ್ದಾರೆ ಸೆಂಟ್ರಲ್ ರೋಡ್ ಫಂಡ್ ಸ್ವಾಮಿ, Rs. 60 crores we have got. That amount we are spending on development of roads. That was the intendtion of the government. ಅದನ್ನೇ ನಾನು ಹೇಳಬೇಕು ಎಂದು ಕೊಂಡಿದ್ದು.

ಅಧ್ಯಕ್ಷರು :- ಥ್ಯಾಂಕ್ಸ್, ಆಯಿತಲ್ಲಾ, ಬಿಲ್ ಪಾಸ್ ಆಯಿತಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ :- ಕಲೆಕ್ಷನ್ ರಾಜ್ಯ ವ್ಯಾಪ್ತಿ ಬರುತ್ತಿತ್ತು. ಖರ್ಚು ಬೆಂಗಳೂರು ನಗರಕ್ಕೆ ಆಗುತ್ತಿತ್ತು. Now we are extending infrastructure development to other places...........

ಶ್ರೀ ಶಿವಾನಂದ ಪಾಟೀಲ್: - ರಾಜ್ಯಕ್ಕೆ ಇದು ಹೊಸ ತೆರಿಗೆ.

ಶ್ರೀ ಡಿ.ಬಿ. ಚಂದ್ರೇಗೌಡ - ನಾನು ಆಗಲೇ ಹೇಳಿದ್ದೇನೆ. ಇದು ಹೊಸ ತೆರಿಗೆಯಲ್ಲ, ಹೊಸ ತೆರಿಗೆಯಲ್ಲ, ಹೊಸ ತೆರಿಗೆಯಲ್ಲ ಹಳೆಯ ತೆರಿಗೆಯನ್ನೇ, we are extending infrastructure development to other places of the State.

ಬೆಂಗಳೂರಿನಿಂದ ತೆಗೆದುಕೊಂಡು ಹೋಗಿ ನಿಮ್ಮ ಊರಿಗೂ ಕೊಡುತ್ತಾ ಇದ್ದೀವೆ ಎಂಬುದೇ ಆಗಿದೆ. ಅದು ಬೇಡ ಎಂದು ಮಾನ್ಯ ರಾಮದಾಸ್‌ರವರು ಹೇಳಿದರೆ ನಾನೇನ್ಮಾಡಲಿ?

ಅಧ್ಯಕ್ಷರು :- ಆಯಿತು, ಈಗಾಗಲೇ ಬಿಲ್ ಪಾಸಾಯಿತಲ್ಲಾ.

ಶ್ರೀ ಡಿ.ವಿ. ಸದಾನಂದಗೌಡ: - ನಮಗೆ ಕನ್‌ಫ್ಯೂಶನ್ ಬಂದದ್ದು ಏನೆಂದರೆ ತಾವು ಆಗ ಈ ಟ್ಯಾಕ್ಸ್‌ನ್ನು ನಾವು ಬೇರೆ ಕಡೆಯಲ್ಲೂ ಕೂಡ ಕಲೆಕ್ಷನ್ ಮಾಡುತ್ತೇವೆ ಎಂದು ಹೇಳುವಂಥ ಒಂದು ಹೊಸ ವಿಚಾರವನ್ನು ಪ್ರಸ್ತಾಪ ಮಾಡಿದಿರಿ. ಹಿಂದೆ ಕಲೆಕ್ಷನ್ ಆಗುತ್ತಿತ್ತು. ಆದರೆ ಅದು ಬೆಂಗಳೂರಿನಲ್ಲಿ ಖರ್ಚಾಗುತ್ತಿತ್ತು. ಆದರೆ ಈಗ ರಾಜ್ಯಮಟ್ಟದಲ್ಲಿ ಅದು ವಿಸ್ತರಣೆಯಾಗುತ್ತಿದೆ ಎಂದು ಈಗ ಹೇಳಿದಿರಿ. ಇದನ್ನು ಲೇಟರ್ ಸ್ಟೇಜ್‌ನಲ್ಲಿ ಹೇಳಿದಿರಿ.

ಅಧ್ಯಕ್ಷರು :- ಕನ್‌ಫ್ಯೂಶನ್ ನಿಮಗೆ ಕ್ಲಿಯರ್ ಆಯಿತಲ್ಲಾ ಬಿಡಿ ಗೌಡ್ರೆ. ಈಗ ಕರ್ನಾಟಕ ಸ್ಟಾಂಪು (ತಿದ್ದುಪಡಿ) 2002ರ ಮಸೂದೆಯನ್ನು ಪರ್ಯಾಲೋಚನೆಗೆ ಸಚಿವರು ಮಂಡಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು): - ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ." ಪ್ರಸ್ತಾವವನ್ನು ಮಂಡಿಸಲಾಯಿತು

ಆ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2002, ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : - ಮಾನ್ಯ ಅಧ್ಯಕ್ಷರೆ, ಈ ಬಿಲ್ ಅನ್ನು ತಂದಿರುವಂತಹ ಉದ್ದೇಶ 2006 ಮಾರ್ಚ್ 31 ರವರೆಗೆ ಅಂದರೆ ದಿನಾಂಕ: 30.6.2001ರ ಸರ್ಕಾರಿ ಆದೇಶ ಸಿಐ 167 ಎಸ್‌ಪಿಐ 2001ರಲ್ಲಿ ಹೊಸ ಕೈಗಾರಿಕಾ ನೀತಿಯನ್ನು ನಿರ್ದಿಷ್ಟಪಡಿಸಲಾದಂತೆ, ಹೊಸ ಅತೀ ಸಣ್ಣ, ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ, ದೊಡ್ಡ ಪ್ರಮಾಣದ ಕೈಗಾರಿಕಾ ಘಟಕಗಳು, ಬೃಹತ್ ಯೋಜನೆಗಳು ಸದರಿ ನೀತಿಯಲ್ಲಿ ರಾಜ್ಯಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟ ಪಡಿಸಿದ ಕೋರ್ ಪ್ರದೇಶದಂತಹ ಪ್ರಮುಖ ಯೋಜನೆಗಳ ಸಂಬಂಧದಲ್ಲಿ ಬರೆದು ಕೊಡಲಾಗುವ ಯಾವುದೇ ನಿಶ್ಚಿತ ಪತ್ರದ ಮೇಲೆ ಸಂದಾಯ ಮಾಡತಕ್ಕಂಥ ಸ್ಟಾಂಪ್ ಶುಲ್ಕವನ್ನು ಅಧಿಸೂಚನೆ ಮೂಲಕ ಅದನ್ನು ನಿರ್ದಿಷ್ಟಪಡಿಸಿದಂತೆ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು. ಆದ್ದರಿಂದ ಇದು ಅವಶ್ಯಕತೆಯೆಂದು ಪರಿಗಣಿಸಲಾಗಿದೆ. ಇದಕ್ಕೆ 2006ರವರೆಗೆ ಅವಕಾಶ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀಕಂಠಯ್ಯನವರು ಕರ್ನಾಟಕ ಸ್ಟಾಂಪ್ ಅಮೆಂಡ್‌ಮೆಂಟ್ ಬಿಲ್ ಅನ್ನು ಮಂಡನೆ ಮಾಡಿದ್ದಾರೆ. ಇಲ್ಲಿ ಮುಖ್ಯವಾಗಿ ಅವರ ಉದ್ದೇಶ ಇರುವುದು, 2006 ಮಾರ್ಚ್ 31ರವರೆಗೆ ಎಂದರೆ ದಿನಾಂಕ: 30.6.2001ರ ಸರ್ಕಾರದ ಆದೇಶದ ಪ್ರಕಾರ ಈ ಒಂದು ಹೊಸ ಕೈಗಾರಿಕಾ ನೀತಿಯೊಳಗೆ ಅತೀ ಸಣ್ಣ ಮತ್ತು ಸಣ್ಣ ಪ್ರಮಾಣದ, ಮಧ್ಯಮ ಪ್ರಮಾಣದ ಅಥವಾ ದೊಡ್ಡ ಪ್ರಮಾಣದ ಕೈಗಾರಿಕಾ ಘಟಕಗಳು ಮತ್ತು ಬೃಹತ್ ಯೋಜನೆಗಳು ಅಥವಾ ಕೋರ್ ಪ್ರದೇಶ ಎಂದು ಹೇಳಿದ್ದೀರಿ. 'ಕೋರ್ ಪ್ರದೇಶ' ಎಂದರೆ ಏನು ಎಂಬುದನ್ನು ಸ್ಪಷ್ಟೀಕರಣ ಮಾಡಿದರೆ ಒಳ್ಳೆಯದು. ಇಂಗ್ಲೀಷ್‌ನಲ್ಲಿ ಅದೇ ರೀತಿ ಇದೆ. ಆದರೆ ಕನ್ನಡದಲ್ಲಿ ಅದನ್ನು ಟ್ರಾನ್ಸ್‌ಲೇಷನ್ ಮಾಡಿಲ್ಲ. ಈಗ ಇದನ್ನು ಏನು ಮಾಡಿದ್ದೀರಿ, ಇದು ಪ್ರಸ್ತಾವಿಕ ಶಾಸನಾತ್ಮಕ ಕ್ರಮದಿಂದ ರಾಜ್ಯದ ಬೊಕ್ಕಸಕ್ಕೆ 250 ಕೋಟಿ ರೂಪಾಯಿ ರಾಜಸ್ವ ನಷ್ಟವಾಗುತ್ತದೆಂದು ಹೇಳಿದಿರಿ. ನಾನು ಇಲ್ಲಿ ಹೇಳುವುದೇನೆಂದರೆ, ಸಣ್ಣ ಕೈಗಾರಿಕೆಗಳಿಗೆ 320 ರಿಂದ 340 ಕೋಟಿ ರೂಪಾಯಿ ಸಬ್ಸಿಡಿ ಕೊಟ್ಟಿಲ್ಲ. ಅವೆಲ್ಲಾ ನಶಿಸಿ ಹೋಗಿವೆ. ಈಗ ನೀವು ಸ್ಟಾಂಪ್ ಎಕ್ಸ್ ಮೆಷನ್ ಮಾಡಿ, ಕೋರ್ ಪ್ರದೇಶದಲ್ಲಿ ಇರುವಂತಹ ಕೈಗಾರಿಕೆಗಳಿಗೆ ಸ್ಟಾಂಪ್ ಡ್ಯೂಟಿ ಎಗ್ಸ್‌ಂಷನ್ ಮಾಡುವುದಕ್ಕೆ ಹೊರಟಿದ್ದೀರಿ. ಇದು ಜನರಲ್ ಆಗಿ ಎಲ್ಲರಿಗೂ ಅನ್ವಯವಾಗುತ್ತದೋ ಹೇಗೆ? 2006 ಮಾರ್ಚ್ 31ರ ಅವಧಿಯವರೆಗೆ ಯಾರ್‍ಯಾರು ಹೊಸದಾಗಿ ಕೈಗಾರಿಕೆಗಳನ್ನು ಮಾಡುತ್ತಾರೆ, ಯಾರ್‍ಯಾರು ಸೇಲ್ ಮಾಡುತ್ತಾರೆ. ಅವರಿಗೆ ಜನರಲ್ ಆಗಿ ಕಾಮನ್ ಆಗಿ ಅನ್ವಯವಾಗುತ್ತದೆಯೇ ಅಥವಾ ಸರ್ಕಾರವೇ ತಮ್ಮ ಅಧಿಕಾರ ವ್ಯಾಪ್ತಿಯಿಂದ ಯಾರಿಗೆ ಕೊಡಬೇಕೆಂದು ಇಂಟರೆಸ್ಟಡ್ ಇದ್ದಾರೆ ಅಂತಹವರಿಗೆ ಮಾತ್ರ ಇದು ಸೀಮಿತವಾಗುತ್ತಿದೆಯೇ? ಇದು ಬಹಳ ಮುಖ್ಯವಾದುದು. ಏಕೆಂದರೆ ಯಾವುದೋ ಕೆಲವೊಂದು ಕೈಗಾರಿಕೆಗಳನ್ನು ಸೆಲೆಕ್ಟ್ ಮಾಡಿ ಅವರಿಗೆ ಮಾತ್ರ ಎಗ್ಸ್‌ಂಶನ್

ಮಾಡುವುದಕ್ಕೆ ಸರ್ಕಾರ ಅಧಿಕಾರ ತೆಗೆದುಕೊಂಡು ಈ ರೀತಿ ಮಾಡುತ್ತಿದೆಯಾ? ನೀವು ಜನರಲ್ ಆಗಿ ಕೊಟ್ಟರೆ ಅಡ್ಡಿ ಇಲ್ಲ. ಎಲ್ಲರಿಗೂ ಸಮಾನವಾಗುತ್ತದೆ. ಈ ರೀತಿ ಆದರೆ ಒಳ್ಳೆಯದು. ಆದರೆ ಇದು ಕೆಲವರಿಗೆ ಮಾತ್ರ ಸೀಮಿತವಾಗಿ, ಸರ್ಕಾರ ಅಧಿಕಾರ ತೆಗೆದುಕೊಂಡು ಯಾರಿಗೆ ಕೊಡಬೇಕೆಂದು ಇಂಟರೆಸ್ಟ್ ಇದೆ ಅವರಿಗೆ ಕೊಡುವಂತಹ ಕೆಲಸವಾದರೆ ಅದರಿಂದ ಸಮಸ್ಯೆಯುಂಟಾಗುತ್ತದೆ. ಇದರ ಬಗ್ಗೆ ಹಾಗೂ ಕೋರ್ ಪ್ರದೇಶದ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ತಾವು ಇಲ್ಲಿ ಇದರಿಂದ 250 ಕೋಟಿ ರೂಪಾಯಿ ರೆವಿನ್ಯೂ ನಷ್ಟವಾಗುತ್ತದೆಂದು ಹೇಳಿದ್ದಿರಿ. 300 ಕೋಟಿ ರೂಪಾಯಿಯಷ್ಟು ಸಬ್ಸಿಡಿಯನ್ನು ಕೊಟ್ಟುಬಿಟ್ಟರೆ ಸಣ್ಣ ಕೈಗಾರಿಕೆಗಳಿಗೆ ನೀವು ಸಹಾಯ ಮಾಡುವುದಾದರೆ ಇನ್ನು 300 ಕೋಟಿ ರೂಪಾಯಿಯಷ್ಟು ಸಬ್ಸಿಡಿ ಬಾಕಿ ಉಳಿದಿದೆ. ಅದನ್ನು ಕೊಡುವುದಕ್ಕೆ ತಯಾರಿಲ್ಲ. ಅದನ್ನು ಬಾಂಡ್ ಮುಖಾಂತರ ಬೇರೆ ಬೇರೆ ಮುಖಾಂತರ ಕೊಡುತ್ತೇವೆಂದು ಹೇಳಿದರು. ಎರಡು ವರ್ಷವಾಯಿತು, ಸರ್ಕಾರ ಅದನ್ನು ಹಾಗೆ ಹೇಳಿಕೊಂಡು ಬಂದಿದೆ. ಆದರೆ ಅದನ್ನು ನೀವು ಕೊಡುವುದಕ್ಕೆ ತಯಾರಿಲ್ಲ. ಇನ್ನು ಸಣ್ಣ ಕೈಗಾರಿಕೆಗಳನ್ನು ಯಾವ ರೀತಿ ಉದ್ಧಾರ ಮಾಡುವುದಕ್ಕೆ ಸಾಧ್ಯವಿದೆ? ಇಲ್ಲಿ ನೀವು ಎಗ್ಸ್‌ಂಶನ್ ಕೊಟ್ಟು ಮಾಡುತ್ತೇವೆಂದು ಹೇಳದ್ದೀರಿ. ಆದರೆ ಫಸ್ಟ್ ಪ್ರೈಯಾರಿಟಿ ಅದನ್ನು ಕೊಡಬೇಕಾಗಿತ್ತಲ್ಲ. ಸರ್ಕಾರ ಆ ಒಂದು ಬರ್ಡನ್ ಒಪ್ಪಿಕೊಳ್ಳಬೇಕಾಗಿತ್ತು. ಅದನ್ನು ಮಾಡಲಿಲ್ಲ. ಅದುದರಿಂದ ಈ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ಸಣ್ಣ, ಅತೀ ಸಣ್ಣ, ಅಲ್ಪ ಪ್ರಮಾಣದ, ದೊಡ್ಡ ಪ್ರಮಾಣದ ಮೇಗಾ ಪ್ರಾಜೆಕ್ಟ್‌ಗಳು ಎಂದು ಎಲ್ಲಾ ಹೇಳಿದೆ ಇದು ಎಲ್ಲರಿದೂ ಅನ್ವಯವಾಗುತ್ತದೆ. ಸಮಸ್ತರಿಗೂ ಅನ್ವಯವಾಗುತ್ತದೆ. ಇದರಿಂದ ಸರ್ಕಾರ ಒಂದೇ ಅಲ್ಲ ಖಾಸಗಿಯವರಿಗೂ ಸಹ ಅನುಕೂಲವಾಗುತ್ತದೆ. ಇರತ್ತು ಕೋರ್ ಎಂದರೆ ಹಿಂದುಳಿದ ಪ್ರದೇಶ ಎಲ್ಲಿ ಎಲ್ಲಾ ಕಡೆ ಹಿಂದುಳಿದ ಪ್ರದೇಶದಲ್ಲೆ............

ಶ್ರೀ ಬಿ.ಎನ್. ಬಚ್ಚೇಗೌಡ: - ಕೋರ್ ಪ್ರದೇಶ ಎಂದರೆ ಏನು ಎಂದು ಡೆಫನೆಷನ್ ಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: - ಸಾಮಾನ್ಯವಾಗಿ ಕೋರ್ ಎಂದರೆ ಅದೇ ಅರ್ಥ ಬರುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ(ಪುತ್ತೂರು): - ಮಾನ್ಯ ಅಧ್ಯಕ್ಷರೆ, 2001ರ ನ್ಯೂ ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ನಾಲ್ಕು ಜೋನ್ ಎಂದು ಮಾಡಿದ್ದಾರೆ. ಜೋನ್ (ಎ), ಜೋನ್(ಬಿ), ಜೋನ್(ಸಿ) ಹಾಗೂ ಜೋನ್ (ಡಿ) ಎಂದು ಮಾಡಿದ್ದೀರಿ. ಬೇರೆ ಬೇರೆ ಜೋನ್‌ಗಳಿಗೆ ಬೇರೆಬೇರೆ ಇನ್‌ಸೆಂಟೀವ್ ಕನ್ಸ್‌ಷನ್ ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೀರಿ. ಈ ರೀತಿ ಬೇರೆ ಬೇರೆ ಇನ್‌ಸೆಂಟೀವ್ ಹಾಗೂ ಕನ್ಸೆಷನ್ ಕೊಡುವಂತಹ ಹಿನ್ನೆಲೆಯಲ್ಲಿ ನೀವು ಇದರಲ್ಲಿ ಏನು ತೋರಿಸಿದ್ದೀರಿ ಎಂದರೆ ರಾಜ್ಯಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಕೋರ್ ಪ್ರದೇಶ ಎಂದರೆ ಆಗಾಗ ಇದು ಬದಲಾವಣೆಯಾಗುತ್ತದೆಯೇ? ಕೋರ್ ಪ್ರದೇಶ ಎಂದರೆ ಜೋನ್ ಎಂದು ನ್ಯೂ ಇಂಡಸ್ಟ್ರೀಯಲ್ ಪಾಲಿಸಿಯಲ್ಲಿ ಹೇಳುವಂತೆ ಏನು ತೋರಿಸಿದ್ದೀರಿ ಅದೇ? ಯಾವುದು ಇದು ಎಂದು ನಿಶ್ಚಯವಾಗಬೇಕು. ಮತ್ತೆ ನೀವು ಕಾಲಕಾಲಕ್ಕೆ ನಿರ್ದಿಷ್ಟಪಡಿಸುವಂತಹ ಕೋರ್ ಪ್ರದೇಶವೆಂದು ಹೇಳುತ್ತೀರಿ. ಇದರಿಂದ ಏನಾಗುತ್ತದೆ

ಎಂದರೆ ನಿಮ್ಮ ವಿಮ್ಸ್ ಅಂಡ್ ಫ್ಯಾನ್ಸಿಯಂತೆ ನಿಮಗೆ ಯಾವುದನ್ನು ಹೇಗೆ ಐಡೆಂಟಿಫೈ ಮಾಡಬೇಕೆಂದು ಕಾಣುತ್ತದೆ. ಅದನ್ನು ಐಡೆಂಟಿಫೈ ಮಾಡುವಂತಹ ವ್ಯವಸ್ಥೆಗಳಿಗೆ ತಮ್ಮ ಹೊಂದಾಣಿಕೆ ಮಾಡಿಕೊಳ್ಳುತ್ತೀರಿ. ಇದರಿಂದ ಏನಾಗುತ್ತದೆ ಎಂದರೆ ಒಂದು ರೀತಿಯಲ್ಲಿ ಒಳಗಿಂದೊಳಗೆ ವ್ಯವಹಾರಿಕವಾದಂತಹ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದಕಾರಣ ಕೋರ್ ಎಂದರೆ ಏನು? ಕಾಲಕಾಲಕ್ಕೆ ನಿರ್ದಿಷ್ಟಪಡಿಸುವಂತಹ ಕೋರ್ ಪ್ರದೇಶ ಎಂದರೆ ಯಾವುದು? ಅದಕ್ಕೆ ಮೊದಲ ಇಂಡಸ್ಟ್ರೀಯಲ್ ಪಾಲಿಸಿಯಲ್ಲಿ ತೋರಿಸಿದಂತಹ ಜೋನ್‌ಗಳಿಗೆ ಏನಾದರೂ ಹೊಂದಾಣಿಕೆ ಇದೆಯೆ ಅಥವಾ ಇಂಡಸ್ಟ್ರಿಯಲ್ ಜೋನ್‌ಗೂ ಮತ್ತು ಕೋರ್ ಪ್ರದೇಶಕ್ಕೂ ಹೊಂದಾಣಿಕೆ ಆಗದೆ ನೀವು ಪ್ರತ್ಯೇಕವಾಗಿ ಅದರ ಬಗ್ಗೆ ಅಧಿಸೂಚನೆ ಹೊರಡಿಸುತ್ತಿದ್ದೀರಾ ಆದರ ಬಗ್ಗೆ ಕ್ಲಾರಿಫೈ ಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ): - ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿಯಲ್ಲಿ, ಇವತ್ತು ಕೈಗಾರಿಕೆಗಳು, ಸಣ್ಣ, ಅತೀ ಸಣ್ಣ, ಮಧ್ಯಮ ಪ್ರಮಾಣದ ದೊಡ್ಡ ಪ್ರಮಾಣದ ಕೈಗಾರಿಕೆಗಳು ಎಲ್ಲವನ್ನೂ ಸೇರಿಸಿದ್ದಾರೆ. ಕೈಗಾರಿಕೆಗಳು ಎಂದು ಬರುವಂತಹ ಡೆಫನೇಷನ್ ಪ್ರಕಾರ ಇವರು ರಿಲೀಫ್ ಕೊಡುವುದು ಯಾವುದಕ್ಕೆಂದರೆ ಸಣ್ಣ ಕೈಗಾರಿಕೆಗಳು, ಅತೀ ಸಣ್ಣ ಕೈಗಾರಿಕೆಗಳು ಇವುಗಳಿಗೆ ಕೊಡುವುದು. ಅದೇರೀತಿ ಲಾರ್ಜ್ ಸ್ಕೇಲ್ ಎಂದು ಹೇಳಿ ಮಧ್ಯಮ ಪ್ರಮಾಣದ ಮತ್ತು ಬೃಹತ್ ಪ್ರಮಾಣದ ಯೋಜನೆಗಳಿಗೆ ಸಹ ಇದೆ ರಿಲೀಫ್ ಅನ್ನು 2006 ರವರೆಗೆ ನಾವು ಎಕ್ಸ್‌ಟೆಂಡ್ ಮಾಡಿಕೊಂಡು ಹೋಗುತ್ತೇವೆಂದು ಹೇಳುತ್ತಿದ್ದೀರಿ. ಈಗಾಗಲೇ ಮಾನ್ಯ ಸದಾನಂದಗೌಡರು ಹೇಳಿದ ಹಾಗೆ ನಮ್ಮಲ್ಲಿ ಏನು ಇಂಡಸ್ಟ್ರೀಯಲ್ ಜೋನ್ಸ್ ಎಂದು ಮಾಡಿದ್ದಾರೆ. ಅದರಲ್ಲಿ ಹೊಸದಾಗಿ ಕೋರ್ ಪ್ರದೇಶ ಎಂದು ಇಂಟ್ರಡ್ಯೂಸ್ ಮಾಡಿ ಹೇಳುತ್ತಿರುವುದ್ದಾ ಮಾನ್ಯ ಸಚಿವರು ತಿಳಿಸಿದ ಹಾಗೆ ಹಿಂದುಳಿದ ಪ್ರದೇಶವೆ? ಕೋರ್ ಎಂದರೆ ಒರಟು ಕೋರ್ ಸೆಕ್ಟಾರ್ ಎಲ್ಲಿದೆ ಅದನ್ನು ಐಡೆಂಟಿಫೈ ಮಾಡಿ ಅಲ್ಲಿ ಇವರು ಕೊಡುವಂತಹ ರಿಲೇಫ್ ಏನಿದೆ.........

ಶ್ರೀ ಆರ್.ವಿ. ದೇಶಪಾಂಡೆ: - ಮಾನ್ಯ ಅಧ್ಯಕ್ಷರೆ, ಕೋರ್ ಸೆಕ್ಟಾರ್ ಎಂದರೆ ಬಹಳ ಮಹತ್ವದ ಕೈಗಾರಿಕೆಗಳು, ಯಾವ ಅಭಿವೃದ್ಧಿಯಿಂದ ರಾಜ್ಯಕ್ಕೆ ಒಳ್ಳೆಯದಾಗತ್ತದೆ. ಉದಾಹರಣೆಗೆ ಫುಡ್ ಪ್ರೋಸೆಸಿಂಗ್ ಇಂಡಸ್ಟ್ರೀಸ್, ಐಟಿ ಇಂಡಸ್ಟ್ರೀಸ್, ಈ ರೀತಿಯಾಗಿ ಎಲ್ಲಿ ಉದ್ಯೋಗವಕಾಶ ಹೆಚ್ಚಿದೆ, ಅದಕ್ಕೆ ಈಗಾಗಲೇ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಅವರು ರೆಕಮೆಂಡೇಷನ್ ಮಾಡಿದ್ದು, ಆ ಪ್ರಕಾರ we are working on that.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): - ಮಾನ್ಯ ಅಧ್ಯಕ್ಷರೆ, ಅತ್ಯಂತ ದುಗುಡದಿಂದ ಮಾನ್ಯ ಕಂದಾಯ ಸಚಿವರ ಮೂಲಕ ಈ ಸರ್ಕಾರ ಮಂಡಿಸಿರತಕ್ಕಂಥ ಈ ಮಸೂದೆಯನ್ನು ನಾವು ತೀವ್ರವಾಗಿ ವಿರೋಧ ಮಾಡುತ್ತೇನೆ. ಕಾರಣ ಇದರ ಉದ್ದೇಶಗಳು, ಘನವಾದ ಉದ್ದೇಶಗಳು ಎಂದು ತೋರಿಸಿದ್ದರೂ ಸಹ, ಮಾನ್ಯ ಸಂಸದೀಯ ವ್ಯವಹಾರ ಸಚಿವರು ಈ ಕಡೆ ಗಮನ ಕೊಟ್ಟರೆ ಒಳ್ಳೆಯದೆಂದು ಭಾವಿಸುತ್ತೇನೆ. Statement of objects and Reasons - it reads thus;

> " It is considered necessary to reduce or remit by notification till 31st March 2006, the stap duty payable on any

> instrument, to be specified therein executed by, specified new Tiny, Small scale, Medium Scale of Large Scale Industrial Units or Mega Project as defined in the new industrial policy vide Government Order CI 167 SPI 2001, dated 30.6.2001 or by such key projects of core area as defined in the said policy or specified by the State Government from time to time."

ಇವೆಲ್ಲಾ ಒಳ್ಳೊಳೆಯ ಶಬ್ದಗಳು. ಈ ಸ್ಟಾಂಪ್ ಡ್ಯೂಟಿ ಎಗ್ಸ್ಂಶನ್ ಕೊಡುವುದೆಂದರೆ ನಮ್ಮಲ್ಲಿ ಬರತಕ್ಕಂಥ ಸಾಫ್ಟ್‌ವೇರ್ ಕಂಪನಿಗಳೇನಿವೆ, ಆ ಕಂಪನಿಗಳಿಗೆ ಸ್ಟಾಂಪ್ ಡ್ಯೂಟಿ ಏಗ್ಸ್ಂಶನ್ ಕೊಡುತ್ತೇನೆಂದರೆ ರಾಜ್ಯದ ಬೊಕ್ಕಸಕ್ಕೆ ಇನ್ಯಾರು ದುಡ್ಡು ಕೊಡಬೇಕು? ಕೂಲಿ ಮಾಡುವವರು ಕೊಡಬೇಕಾ? ಬೆಂಕಿಪೊಟ್ಟಣ ತೆಗೆದುಕೊಳ್ಳುವವರು ಕೊಡಬೇಕಾ? ಸ್ಥಾನಕ್ಕೆ ಸಾಬೂನು ಇಲ್ಲದೆ ಎಂಟು ದಿನಕ್ಕೆ ಒಂದು ಸಾರಿ ಸಾಬೂನು ಹಚ್ಚಿಕೊಳ್ಳುವವನು ದುಡ್ಡು ಕೊಡಬೇಕಾ ಅಥವಾ ತಾಳಿ ಪಡೆದುಕೊಳ್ಳುವ ಬಡವರು ನಿಮಗೆ ದುಡ್ಡು ಕೊಡಬೇಕಾ? ಒಂದು ವರ್ಷಕ್ಕೆ ಒಂದು ಸಾರಿ ಬಟ್ಟೆ ಹೊಲಿಸಿಕೊಳ್ಳುವವನು ದುಡ್ಡು ಕೊಡಬೇಕಾ? ತೆರಿಗೆ ಕೊಡಬೇಕಾ ಅಥವಾ ಈ ಸಾಫ್ಟ್‌ವೇರ್ ಕಂಪನಿಯವರಿಗೆ ನೀವು ಸ್ಟಾಂಪ್ ಡ್ಯೂಟಿಯನ್ನು ಇಷ್ಟೊಂದು ಧಾರಾಳವಾಗಿ ವರ್ಷಕ್ಕೆ 250 ಕೋಟಿರೂಪಾಯಿ ಎಗ್ಸ್ಂಶನ್ ಕೊಡುವುದಕ್ಕೆ ಕಾರಣವೇನು? ನನಗೆ ತಿಳುವಳಿಕೆ ಇರುವ ಹಾಗೆ ಯಾವುದೇ ಸ್ಪೆಸಿಫಿಕ್ ಇಂಡಸ್ಟ್ರೀ, ಬಹಳ ದೊಡ್ಡ ಇಂಡಸ್ಟ್ರೀ ಅದು. ಬೀದರ್ ನಲ್ಲಿ ಯಾರೋ ಒಬ್ಬ ಪುಣ್ಯಾತ್ಮರು ಕೈಗಾರಿಕೆ ಶುರು ಮಾಡುತ್ತೇವೆಂದು ಬರುತ್ತಾರೆ. ಅದು ಹಿಂದುಳಿದಂತಹ ಏರಿಯವಾಗಿದೆ. ಗದಗ್‌ನಲ್ಲಿ ಅದೇ ರೀತಿಯಲ್ಲಿ ಇಂಡಸ್ಟ್ರೀಯನ್ನು ಪ್ರಾರಂಭ ಮಾಡುತ್ತೇವೆಂದು ಬರುತ್ತಾರೆ. ಅದೂ ಸಹ ಹಿಂದುಳಿದಂತಹ ಏರಿಯವಾಗಿದೆ ಬಿಜಾಪುರದಲ್ಲಿ ಫುಡ್ ಪ್ರೋಸೆಸ್‌ಸಿಂಗ್ ಯೂನಿಟ್‌ಗಳನ್ನು ದ್ರಾಕ್ಷಿ, ದಾಳಿಂಬೆ, ಹಣ್ಣುಗಳನ್ನು ಬಹಳ ಚೆನ್ನಾಗಿ ಬೆಳೆಯುತ್ತಿದ್ದಾರೆ. ಆ ದ್ರಾಕ್ಷಾ ರಸವನ್ನು, ದಾಳಿಂಬೆ ರಸವನ್ನು, ವಿದೇಶಗಳಿಗೆ ಕಳುಹಿಸುತ್ತೇವೆಂದು ಯಾರೋ ಪುಣ್ಯಾತ್ಮರು ಫ್ಯಾಕ್ಟರಿಯನ್ನು ಹಾಕುತ್ತೇವೆಂದು, ಅಥವಾ ಬರಾಮತಿಗೆ ಒಂದು ಟೈಆಫ್ ಮಾಡಿಕೊಳ್ಳುತ್ತೇವೆ, ಅದಕ್ಕೆ ಒಂದು ಸ್ಮಾಲ್ ಇನ್‌ಸ್ಟಿಟ್ಯೂಷನ್ ಮಾಡುತ್ತೇವೆಂದು ಬಂದರೆ, ಅದಕ್ಕೆ ನೀವು ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಮ್‌ಶನ್ ಕೊಡುತ್ತೇವೆಂದು ಹೇಳಿದರೆ, ಈಗಾಗಲೇ ಇದರ ಬಗ್ಗೆ ಕ್ಯಾಬಿನೆಟ್‌ಗೆ ಅಧಿಕಾರವಿದೆ. ಮಾನ್ಯ ದೇಶಪಾಂಡೆಯವರೇ, ತಮಗೂ ಗೊತ್ತಿದೆ, ಕೋಕಾ ಕೋಲಾ, ಪೆಪ್ಸಿ ಕಂಪೆನಿಯವರು, ಬೆಂಗಳೂರಿನಲ್ಲಿ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡಿದರು. ನನಗೆ ಗೊತ್ತಿರುವಂತಹ ಮಾನ್ಯ ದೇಶಪಾಂಡೆಯವರು ಕ್ರಿಯಾಶೀಲ ಮಂತ್ರಿಗಳಾಗಿದ್ದಾರೆ. ಅವರಿಗೆ ಯಾವ ಕೆಲಸ ಮಾಡಿಸಬೇಕೆಂದರೂ ಬಹಳ ಹರತೊಟ್ಟು ಹೇಗೆ ಮಾಡಿಸಿಕೊಳ್ಳಬೇಕೆಂಬುದು ಬಹಳ ಚೆನ್ನಾಗಿ ಗೊತ್ತಿರುವಂಥವರು. ಈಗ ತಮಗೆ ಹೇಳಬೇಕೆಂದರೆ ಈ ರೀತಿ ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಮ್‌ಶನ್, ಮತ್ತೆ ಬೇಕಾದಷ್ಟು ಎಕ್ಸ್‌ಮ್‌ಶನ್‌ಗಳನ್ನು, ರಿಲೀಫ್‌ಗಳನ್ನು, ಪ್ರೋತ್ಸಾಹ ಧನ, ನತ್ತೆ ಬಹಳ ನಿಶ್ಶಕ್ತರಾಗಿರುವವರಿಗೆ ನಾವು ಕೊಡುತ್ತೇವೆಲ್ಲಾ, ಆ ರೀತಿಯಾಗಿ ನಿಶ್ಶಕ್ತರಾಗಿರುವಂಥ ಜನರಿಗೆ ತಾವು ಶಕ್ತಿಯನ್ನು ತುಂಬಿಸುವಂಥಾದ್ದಕ್ಕೆ ತನ್ನ ಪಾಲುದಾರಿಕೆ ಏನು, ಎನ್ನುವುದನ್ನು ನಮಗೆ ಸ್ವಲ್ಪ ಸರ್ಕಾರದವರು ತಿಳಿಸಬೇಕಾಗುತ್ತದೆ. ಈಗ 250 ಕೋಟಿ ರೂಪಾಯಿಗಳು, ಸರ್ಕಾರ ಇಂತಹ

ಮಾತುಗಳಿಗೆ ಬೇಜವಾಬ್ದಾರಿಯಿಂದ ಮಾತನಾಡುವುದು, ಸರ್ಕಾರ ರಚನಾತ್ಮಕ ವಾಗಿ ಕೆಲಸ ಮಾಡುತ್ತಿದೆ, ವಿರೋಧಪಕ್ಷದ ನಾಯಕರು ರಚನಾತ್ಮಕವಾಗಿ ಮಾತನಾಡುವುದಿಲ್ಲವೆಂದು ಹೇಳುತ್ತಾರೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಮಾತನಾಡಿದ್ದಾರೆ, ಅದಕ್ಕೆ ಪೂರಕವಾಗಿ ನಾನು ಮಾನ್ಯ ನಾಯಕರಿಗೆ ಕೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಬಹಳ ಸಾರಿ ಘೋಷಣೆಗಳನ್ನು ಮಾಡಿದ್ದಾರೆ. ಅವರು ಹಣಕಾಸಿನ ವ್ಯವಹಾರಗಳನ್ನು ಬಹಳ ಬಿಗಿಯಾಗಿ ಮೋಡಿಕೊಳ್ಳುತ್ತೇನೆಂದು ಹೇಳಿದ್ದಾರೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಚಿಂತಾಕ್ರಾಂತರಾಗಿರುವ ರೀತಿಯಲ್ಲಿ ಹೇಳಿದರು. ಮೊನ್ನೆ ಬಜೆಟ್‌ಗೆ ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ ನಮ್ಮ ಪರಿಸ್ಥಿತಿ ಚಿಂತಾಜನಕವಾಗಿ ಇಲ್ಲವೆಂದು ಹೇಳಿದರು. ಚಿಂತಾಜನಕವಾಗಿ ಇಲ್ಲದೇ ಹೋಗಿದಿದ್ದರೆ, ಇಲ್ಲಿ ಅನೇಕಜನ ಹಿರಿಯ ಸದಸ್ಯರುಗಳು ಮಾನ್ಯ ಮುಖ್ಯಮಂತ್ರಿಗಳ ಸಹೋದ್ಯೋಗಿಗಳಿದ್ದೀರಿ ನಿಮ್ಮ ನಿಮ್ಮ ಖಾತೆಗಳಲ್ಲಿ 2001-2002ರ ಮಾರ್ಚ್ ಕೊನೆಗೆ ಯಾವ್ಯಾವ ಸ್ಟೇಟ್ ಅಲೋಕೇಶನ್ ಫಂಡ್ಸ್‌ನಲ್ಲಿ ಎಷ್ಟೆಷ್ಟು ದುಡ್ಡು ಕಡಿಮೆಯಾಗಿದೆ. ಎನ್ನುವುದನ್ನು ಪರ್ ಫಾರ್ಮನ್ಸ್ ಬೆಜೆಟ್ ಸಂದರ್ಭದಲ್ಲಿ ಮಾತನಾಡಬಹುದಾಗಿತ್ತು. ಆದರೆ ನಾವು ಆ ಸಮಯದಲ್ಲಿ ಧರಣಾ ಮಾಡಿದೆವು, ನಾವು ಕೋಪ ಮಾಡಿಕೊಂಡು ಸದನದಿಂದ ಹೊರಗಡೆ ಹೊರಟು ಹೋದೆವು, ತಾವು ಗೊಂದಲದಲ್ಲಿ ಅದನ್ನು ಪಾಸ್ ಮಾಡಿಸಿ ಬಿಟ್ಟಿರಿ. ಅದರ ಕೀರ್ತಿ ಅಧ್ಯಕ್ಷರೇ, ತಮಗೆ ಸಲ್ಲುತ್ತದೆ. ಈ ಸದನಕ್ಕೆ ಸೇರುತ್ತದೆ. ಆ ವಿಷಯ ಏನೇ ಇರಲಿ ಈಗ ನಮ್ಮ ಮುಖ್ಯಮಂತ್ರಿಯವರು ಫೈನಾನ್ಸ್ ಮಿನಿಸ್ಟರ್, 2002ರಲ್ಲಿ ಒಂದು ಮಾತನ್ನು ಹೇಳಿದ್ದರು. ನಾನು ಈ ತರಹದ ಯಾವುದೇ ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಮ್‌ಶನ್ಸ್, ಕನ್ಸೆಶನ್ಸ್, ಇಂಡಸ್ಟ್ರಿಯಲಿಸ್ಟ್‌ಗಳಿಗೆ ಕೊಡುವುದಿಲ್ಲ. ಏಕೆಂದರೆ ಎಸ್.ಎಂ. ಕೃಷ್ಣ ಎಂದರೆ ಇಂಡಸ್ಟ್ರಿಯಲಿಸ್ಟ್ ಎಂದು ಬಹಳ ಪ್ಯಾರಲಲ್ ಆಗಿ ಹೋಗುವಂತಹ ಹೆಸರುಗಳು ಎನ್ನುವಂಥಾದ್ದನ್ನೆಲ್ಲಾ ಹೇಳಿದ್ದರು ಏಕೆಂದರೆ ಅವರು 1973ರಲ್ಲಿ ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದರು. ಹೀಗಾಗಿ ಅಂಥಾದ್ದನ್ನು ಕೊಡುವುದಿಲ್ಲವೆಂದು ಹೇಳಿದ್ದರು. ಈಗ ನಾನು ಏನಾದರೂ ಹೇಳುವುದಕ್ಕೆ ಹೋದರೆ ಮಾನ್ಯ ದೇಶಪಾಂಡೆಯವರಿಗೆ ಕೋಪ ಬರುತ್ತದೆ. ಇಲ್ಲಿ ಬೇಡ, ಬೆಳಗಾಂನಲ್ಲಿ, ಕಾರವಾರದಲ್ಲಿ, ಹುಬ್ಬಳ್ಳಿ, ಧಾರವಾಡದಲ್ಲಿ ಎಷ್ಟು ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಿದ್ದೀರಾ, ಮತ್ತೆ ಎಷ್ಟು ಜನರಿಗೆ ಎಂಪ್ಲಾಯ್‌ಮೆಂಟ್ ಆಗಿದೆಯೆಂಬುದನ್ನು ಕೇಳಿದರೆ, ಮಾಡುತ್ತಲೇ ಇದ್ದೇವೆ ಎಂದು ಹೇಳುತ್ತಾರೆ ಆಗುತ್ತದೆ ಆಗುತ್ತದೆಂದು ಹೇಳುತ್ತಾರೆ. ಅದು ಯಾವಾಗ ಆಗುತ್ತದೋ, ನನಗಂತೂ ಗೊತ್ತಿಲ್ಲ. ಆದ್ದರಿಂದ ಈಗ ಏನು ಮಸೂದೆ ತಾವುತರುತ್ತಿದ್ದೀರಿ, ಇದರ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ. ನಾನು ಸರ್ಕಾರಕ್ಕೆ ಮತ್ತೆ ಮಾನ್ಯ ಹಿರಿಯ ನಾಯಕರುಗಳಿಗೆ ತಮಗೆಲ್ಲಾ ಏನು ಸಲಹೆ ಕೊಡುತ್ತೇನೆಂದರೆ ಈಗ ಕೆಲವು ಕಡೆಗಳಲ್ಲಿ ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಮ್‌ಶನ್ ಕೊಡಲೇಬೇಕೆಂದು ಇಟ್ಟುಕೊಳ್ಳಿ ಅಂಥ ಸಂದರ್ಭದಲ್ಲಿ You will fake Specific cases ಇನ್ ಫೋಸಿಸ್‌ನವರು ಬೀದರ್‌ನಲ್ಲಿ ಇಂಡಸ್ಟ್ರಿಯನ್ನು ಮಾಡಿದರೆ, ಗುಲ್ಬರ್ಗಾದಲ್ಲಿ ಮಾಡಿದರೆ, ಬಿಜಾಪುರ ಅಥವಾ ಚಿತ್ರದುರ್ಗ ಜಿಲ್ಲೆಯಲ್ಲಿ ಮಾಡಿದರೆ ಅಥವಾ ನಮ್ಮ ಕಾರವಾರದಲ್ಲಿ ಮಾಡಿದರೆ ಈಗಾಗಲೇ ಇದನ್ನು ಕೊಡಲು ನಿಮಗೆ ಅಧಿಕಾರ ಇದೆ. ಇವರು ಏಳು ವರ್ಷಗಳು ಇಂಡಸ್ಟ್ರಿಯಲ್ ಮಿನಿಸ್ಟರ್ ಆಗಿದ್ದರು. ಯಾವುದೋ ಒಂದು ದಿವಸ ಇವರ ಮಕ್ಕಳು, ಮೊಮ್ಮಕ್ಕಳು, ಕಾಲಕ್ಕೂ ಕೇಳುವ ಹಾಗೆ ಆಗುತ್ತಾರೆ. ಇಂಥವರ ಕಾಲದಲ್ಲಿ ಇಂತಹ ಇಂಡಸ್ಟ್ರಿ ಪ್ರಾರಂಭವಾಯಿತು, ಅಥವಾ ಇಂತಹ ಇಂಡಸ್ಟ್ರಿ ಮುಳುಗಿಹೋಯಿತು.

ಎಂದು ಹೇಳುವಂತಹ ಕಾಲವೂ ಬರುತ್ತದೆ. ಅದುದರಿಂದ ನಾನು ಹೇಳುವಂತಹ ಸಲಹೆ ಏನೆಂದರೆ ಅನಾವಶ್ಯಕವಾಗಿ ಯಾರಿಗೋ ನೀವು ಸಹಾಯವನ್ನು ಮಾಡಬೇಕೆನ್ನುವ ಉದ್ದೇಶದಿಂದ ತಂದಿರುವಂತಹ ಮಸೂದೆಯಾಗಿದೆ. ಬ್ಲಾಂಕೆಟ್ ಆರ್ಡರ್ ಇದು, ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಚೆನ್ನಾಗಿ ಹೇಳಿದರು. ಇದು ಒಂದು ರೀತಿಯ ಸಬ್‌ಲುಂಡ ಎಂದು ಹೇಳುತ್ತಾರೆ ನೋಡಿ ಅದರ ಮೇಲೆ ಮಾತ್ರ ತೋರಿಸಿಕೊಳ್ಳುವಂಥಾದ್ದು, ಒಳಗಡೆ ಏನಿದೆ ಎಂದು ಯಾವುದನ್ನೂ ಇವರು ಹೇಳುವುದಕ್ಕೆ ತಯಾರಿಲ್ಲ. ಇದು ನಿಜವಾಗಿ ಜನರಿಗೆ ಮೋಸ ಮಾಡುವಂತಹ, ದ್ರೋಹ ಮಾಡುವಂತಹ, ವರ್ಷಕ್ಕೆ 250 ಕೋಟಿ ರೂಪಾಯಿಗಳಷ್ಟು ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಮ್‌ಶನ್ ಕೊಡುತ್ತೇವೆಂದು ಹೇಳಿದರೆ, ಇದು ಯಾವ ದುಡ್ಡು ಸ್ವಾಮಿ? ನೀವು ಯಾರಿಗೆ ಎಕ್ಸ್‌ಮ್‌ಶನ್ ಕೊಡುತ್ತಿರುವವಂಥಾದ್ದು? ಇಲ್ಲಿ ನಾವು ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಿ ಎಂದು ಹೇಳುತ್ತಿದ್ದೇವೆ, ಇದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ, ದುಡ್ಡು ಇಲ್ಲ, ನಮ್ಮ ಶಕ್ತಿ ಇಷ್ಟೇ ಎಂದು ಹೇಳುತ್ತೀರಿ, ಅಲ್ಲಿ ರೈತರು ನೇಣು ಹಾಕಿಕೊಂಡು ಸಾಯುತ್ತಿದ್ದಾರೆ, ನಿನ್ನೆ ಒಬ್ಬ ಮಾಸ್ಟರ್ ಸಂಬಳವಿಲ್ಲದೇ ತಿಪಟೂರಿನಲ್ಲಿ ನೇಣು ಹಾಕಿಕೊಂಡು ಸತ್ತು ಹೋಗಿದ್ದಾನೆ. ಆ ಸ್ಥಿತಿಯಲ್ಲಿ ಸರ್ಕಾರದ ಹಣಕಾಸಿನ ಪರಿಸ್ಥಿತಿ ಇರುವಾಗ, ಈ ದುಸ್ಥಿತಿ ಸರ್ಕಾರಕ್ಕೆ ಬರಬಾರದಾಗಿತ್ತು. ಯಾವುದೇ ಕಾರಣಕ್ಕೂ ಮತ್ತೆ ಇದನ್ನು ಮರುಚಿಂತನೆ ಮಾಡಿ. ಇದನ್ನು ವಾಪಸ್ಸು ತೆಗೆದುಕೊಳ್ಳಿ. ಮಾನ್ಯ ಶ್ರೀಕಂಠಯ್ಯನವರು ಒಳ್ಳೆಯವರು, ಇವರು 6 ವರ್ಷಕ್ಕೆ 250 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಇವರು ಬಹಳ ಬುದ್ಧಿವಂತರು ಇವರು ಡ್ರಾಫ್ಟ್ ಮಾಡುವಾಗ, ಬಹಳ ಬುದ್ಧಿವಂತ ಜನರ ಕೈಯಲ್ಲಿ ಡ್ರಾಫ್ಟ್ ಮಾಡಿಸಿರುತ್ತಾರೆ. these will he a probable loss ಈ ಪ್ರಾಬಬಲ್ ಲಾಸ್ 250ರ ಸಂಖ್ಯೆ ಪಕ್ಕದಲ್ಲಿ ಇನ್ನೊಂದು ಸೊನ್ನೆಯನ್ನು ಸೇರಿಸಿದರೆ ಎಷ್ಟು ಆಗುತ್ತದೆ? ಇವರು 2006ರ ವೇಳೆಗೆ ಇರುವುದಿಲ್ಲ. ಆಗ ನಾವು ಹೇಳಿಕೊಳ್ಳುವುದು, ಅಕಸ್ಮಾತ್ ಕೆಲವರು ಇರಬಹುದು, ಎಲ್ಲರೂ ಇರುವುದಿಲ್ಲವೆಂದು ನಾನು ಹೇಳುವುದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ತಾವು ದಯಮಾಡಿ ಇದರ ಬಗ್ಗೆ ಯೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದ ಸಿಂಧ್ಯರವರು ಕೆಲವು ಸಂದೇಹಗಳನ್ನು ವ್ಯಕ್ತ ಮಾಡಿ ಮತ್ತೆ ಯಾರಿಗೋ ಸಹಾಯ ಮಾಡುವುದಕ್ಕೆ, ಯಾರಿಗೋ ಮೋಸ ಮಾಡುವುದಕ್ಕೆ, ಎಂದು ಹೇಳಿದ್ದಾರೆ. ಆ ರೀತಿ ಅಪವಾದ ಮಾಡುವುದಕ್ಕೆ ಅವರಿಗೆ ಅಧಿಕಾರಿವಿದೆ. ಆದರೆ ಆ ರೀತಿಯ ಯಾವುದೇ ಚಿಂತನೆ, ವಿಚಾರಗಳು ಸರ್ಕಾರದಲ್ಲಿ ಇಲ್ಲ. 1984ರಿಂದ ಕೈಗಾರಿಕಾ ನೀತಿಗಳು ಬಂದಿವೆ, ಹಾಗಾಗಿ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಸೇಲ್ಸ್ ಟ್ಯಾಕ್ಸ್, ಎಂಟ್ರಿ ಟ್ಯಾಕ್ಸ್, ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಮ್‌ಶನ್, ಎಲೆಕ್ಟ್ರಿಸಿಟಿ ಟ್ಯಾಕ್ಸ್ ಎಕ್ಸ್‌ಮ್‌ಶನ್, ಇವುಗಳನ್ನು ನಾವು 1985ನೇ ಇಸವಿಯಿಂದ ಕೊಡುತ್ತಾ ಬಂದಿದ್ದೇವೆ. ಇಲ್ಲಿ 2001ರ ಕೈಗಾರಿಕಾ ನೀತಿ ಎಂದರೆ ಏನು? 1996ರ ಕೈಗಾರಿಕಾ ನೀತಿ ಮಾರ್ಚ್ 2000ಕ್ಕೆ ಅಂತ್ಯವಾಯಿತು, ಹಾಗಾಗಿ ಮತ್ತೆ ಹೊಸ ಕೈಗಾರಿಕಾ ನೀತಿ ಬಂತು. ಆದರೆ, ಸಕ್ಸಸೀವ್ ಗೌವರ್ನಮೆಂಟ್ಸ್ ಈ ರೀತಿಯ ರಿಯಾಯಿತಿಗಳನ್ನು ಕೊಡುತ್ತಾ ಬಂದಿದ್ದಾರೆ. ಕಳೆದ 20-25 ವರ್ಷಗಳಿಂದ ಈ ರೀತಿಯ ರಿಯಾಯಿತಿಗಳನ್ನು ಕೊಡುತ್ತಾ ಬಂದಿದ್ದಾರೆ. ಈಗ ಏನಾಗಿದೆ ಎಂದರೆ ಕೇಂದ್ರ ಸರ್ಕಾರ ಇನ್ಸೆಂಟೀವ್‌ಗಿಂತ ಹೆಚ್ಚು ಕೊಡುವಂಥಾದ್ದು ಸರಿಯಲ್ಲ, ಆದುದರಿಂದ ನ್ಯಾಷನಲ್ ಲೆವಲ್‌ನಲ್ಲಿ ಎಲ್ಲಾ ಫೈನಾನ್ಸ್ ಮಿನಿಸ್ಟರ್‌ಗಳ ಸಭೆಯನ್ನು ಮಾಡಿ, ಕೇಂದ್ರ ಸರ್ಕಾರದ ವತಿಯಿಂದ ಒಂದು

ಡಿಸಿಷನ್ ತೆಗೆದುಕೊಂಡರು ಅದು ಏನೆಂದರೆ ಸೇಲ್ಸ್ ಟ್ಯಾಕ್ಸ್ ಇನ್‌ಸ್ಸೆಂಟೀವ್ ಕೊಡಬಾರದು, ದಿನಾಂಕ: 1.1.2000ದಿಂದ ಯಾವುದಕ್ಕೂ ಕೊಡಬಾರದು. ಹಾಗಾಗಿ ನಾವು ಸೇಲ್ಸ್ ಟ್ಯಾಕ್ಸ್ ಬೆನಿಫಿಟ್ ಯಾವ ಕೈಗಾರಿಕೆಗಳಿಗೂ ಕೊಡುತ್ತಾ ಇಲ್ಲ ನಾವು ಸಬ್ಸಿಡಿಯನ್ನು ಎಲ್ಲಾ ಸಣ್ಣ ಕೈಗಾರಿಕೆಗಳಿಗೂ ಕೊಡುತ್ತಿದ್ದೆವು, ಅದನ್ನು ಇವತ್ತು ಕಡಿಮೆ ಮಾಡಿದ್ದೇವೆ, ಏಕೆಂದರೆ ವಿದ್ಯುತ್ ಸಬ್ಸಿಡಿಯನ್ನು ಕೊಡುವುದಕ್ಕೆ ಕಷ್ಟವಾಗುತ್ತಿದೆ, ಕೆಲವು ಕಡೆಗಳಲ್ಲಿ ದುರುಪಯೋಗವಾಗುತ್ತಿದೆ, ಹಾಗಾಗಿ ನಾವು ಟೈನಿ ಇಂಡಸ್ಟ್ರಿಗೆ ಅಷ್ಟೇ ಇವತ್ತು ನಾವು ಸಬ್ಸಿಡಿ ಕೊಡುತ್ತಿದ್ದೇವೆ. Where investment is below Rs. 25 lakhs and those who come in the 4th category. ನಾವು ಕೈಗಾರಿಕೆಗಳನ್ನು ಎ,ಬಿ,ಸಿ ಮತ್ತು ಡಿ ಎಂದು ವರ್ಗಗಳನ್ನು ಮಾಡಿದ್ದೇವೆ, ಡಿ ವರ್ಗದಲ್ಲಿ ಗ್ರೋತ್ ಸೆಂಟರ್ಸ್ ಬರುತ್ತವೆ, ಡಾ|| ನಂಜುಂಡಪ್ಪನವರ ಸಮಿತಿ ವರದಿಯ ಪ್ರಕಾರ ಅತೀ ಬ್ಯಾಕ್‌ವರ್ಡ್ ಏರಿಯಾ ಯಾವುದಿದೆ, ಅದಕ್ಕೆ ನಾವು ಕೊಡುತ್ತೇವೆ, ಅಂದರೆ ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆ, ಮತ್ತೆ ಕೈಗಾರಿಕಾ ಪಾಲಿಸಿಯನ್ನು ತೆಗೆದು ನೋಡಿದರೆ ನಾವು ಏನು ಎ,ಬಿ,ಸಿ, ಡಿ ಎಂದು ಏನು ಮಾಡಿದ್ದೇವೆ, 'ಎ' ಯಲ್ಲಿ ಬೆಂಗಳೂರು ಅರ್ಬನ್, ರೂರಲ್‌ಗಳಲ್ಲಿ ಕೆಲವು ಭಾಗಗಳು ಬಿಟ್ಟು, ಉಳಿದಂಥಾದ್ದು ಬರುತ್ತವೆ. ಕೆಲವು ಕಡೆಗಳಲ್ಲಿ ಅಂದರೆ ಸಾತನೂರು, ಇಂತಹ ಕಡೆಗಳಲ್ಲಿ ಬಹಳ ಬ್ಯಾಕ್ ವರ್ಡ್ ಇರುವಂತಹ ಕಡೆಗಳಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದೇವೆಯೇ ವಿನಃ, ಬೆಂಗಳೂರು ಅರ್ಬನ್, ಮತ್ತೆ ಬೆಂಗಳೂರಿನಲ್ಲಿ ಬಹಳ ಭಾಗಗಳಿಗೆ ನಾವು ಕೊಡುತ್ತಿಲ್ಲ. ಅಲ್ಲಿ ಯಾವ ಇನ್ಸೆಂಟೀವ್ ಸಿಗುತ್ತಾ ಇಲ್ಲ ಇದು ಹಳೆಯ ಪಾಲಿಸಿ, ನಾವು ಏನು ಹೊಸದಾಗಿ ಮಾಡಿದ್ದಲ್ಲ, ಬಿ,ಸಿ,ಡಿ, ಇದರ ಬಗ್ಗೆ ಇಲ್ಲಿ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಬೀದರ್, ಮಂಗಳೂರು, ಬೆಳಗಾಂ, ಉತ್ತರ ಕನ್ನಡ ಜಿಲ್ಲೆ, ಬಾಗಲಕೋಟೆ, ಇಲ್ಲಿ ಸಣ್ಣ, ಮಧ್ಯಮ, ದೊಡ್ಡ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ಕೊಡಬೇಕಾಗುತ್ತದೆ, ಈಗಲೂ ಬೆಂಗಳೂರಿಗೆ ಸಿಗುವುದಿಲ್ಲ, ಆದರೂ ಮಾನ್ಯ ಸಿಂಧ್ಯರವರು ಒಂದು ಪ್ರಶ್ನೆಯನ್ನು ಕೇಳಿದರು. what is core area ಎಂದು ಕೋರ್ ಸೆಕ್ಟಾರ್ ಎಂದರೆ, ಈ ಕೋರ್ ಸೆಕ್ಟಾರ್‌ನಿಂದ ರಾಜ್ಯದ ಅಭಿವೃದ್ಧಿಗೆ ಲಾಭವಾಗಬೇಕು, ಎರಡನೆಯದಾಗಿ ದೊಡ್ಡ ಪ್ರಮಾಣದಲ್ಲಿ ಜನರಿಗೆ ಎಂಪ್ಲಾಯ್‌ಮೆಂಟ್ ಜನರೇಟ್ ಆಗಬೇಕು, ಮೂರನೆಯದಾಗಿ investment should be more than Rs. 100 crores. ಇವತ್ತು ಕೈಗಾರಿಕೆಗಳಿಗೆ ಯಾವುದೇ ರೀತಿಯ ಸವಲತ್ತುಗಳನ್ನೂ ಕೊಡುತ್ತಿಲ್ಲ.

12.40 ಪಿ.ಎಂ.

ನಾವು ಕೊಡುತ್ತಿರುವುದು ಈಗ ಎಂಟ್ರಿ ಟ್ಯಾಕ್ಸ್, ಏಕೆಂದರೆ, ಬೇರೆ ರಾಜ್ಯಗಳಲ್ಲಿ ಹಲವಾರು ಕಡೆ ಎಂಟ್ರಿಟ್ಯಾಕ್ಸ್ ಇಲ್ಲ, ಸೋ ಲೆವೆಲ್ ಪ್ಲೈನ್ ಫೀಲ್ಡ್ ಆಗಬೇಕೆಂದು ಒಂದು ಅಥವಾ ಅರ್ಧ ಪರ್ಸೆಂಟ್ ಎಂಟ್ರಿ ಟ್ಯಾಕ್ಸ್ ಕೊಡುತ್ತಿದ್ದೇವೆ ಅಷ್ಟೆ, ಜೊತೆಗೆ ಸ್ಟಾಂಪ್ ಡ್ಯೂಟಿ. ಅವರದೇ ಪವರ್‌ಅನ್ನು ಅವರ ಜನರೇಟರ್ ಮುಂಚೆನಿಂದ ಅಂದರೆ 10-20 ವರ್ಷಗಳಿಂದ ಇದೆ. ಹಾಕಿಕೊಳ್ಳಬಹುದು ಇದು ಬಿಟ್ಟರೆ ಇವತ್ತು ಯಾರ ಸೌಲತ್ತುಗಳನ್ನೂ ಕೂಡ ಕೈಗಾರಿಕೆಗಳಿಗೆ ನಾವು ಕೊಡುತ್ತಿಲ್ಲ. ಬೆಂಗಳೂರಿನಲ್ಲಿ ಸಪ್ಫೋಸ್ ಕೋರ್ ಏರಿಯಾದಲ್ಲಿ ಬಂದರೆ ಉದಾಹರಣೆಗೆ ಇವತ್ತು ಟೊಯೊಟಾ ಕಂಪನಿ ಬಿಡದಿಯಲ್ಲಿ ಸ್ಥಾಪನೆಯಾಗಿದೆ.ಕೋರ್ ಏರಿಯಾದಲ್ಲಿದೆ ಎ ಗ್ರೂಪ್‌ನಲ್ಲಿ ಬರುತ್ತದೆ ಎಂದು ನಾವು ಸ್ಟ್ಯಾಂಪ್‌ಡ್ಯೂಟಿ ಎಕ್ಸ್‌ಮ್‌ಶನ್ ಕೊಟ್ಟಿದ್ದೇವೆ, ವೋಲ್‌ವೋಗೆ ಕೊಟ್ಟಿದ್ದೇವೆ, ನಂತರ ಇನ್‌ಫೋಸಿಸ್‌ಗೆ ಕೊಟ್ಟಿದ್ದೇವೆ, ಸಿಸ್ಕೋ ಪ್ರೊಪೋಸಲ್‌ಗೆ

ಕೊಟ್ಟಿದ್ದೇವೆ. ಹೀಗೆ ಯಾವುದರಿಂದ ರಾಜ್ಯಕ್ಕೆ ಒಳ್ಳೆಯದಾಗ ಬೇಕು ರಾಜ್ಯದ ಅಭಿವೃದ್ಧಿಗೂ ಒಳ್ಳೆಯದಾಗಬೇಕು, ಎಲ್ಲಿ ಉದ್ಯೋಗ ಅವಕಾಶ ಹೆಚ್ಚಾಗುತ್ತದೆ ಆ ಏರಿಯಾಗೆ ಬೆಟ್ಟರೆ ಬೇರೆಯಾವುದಕ್ಕೂ ಕೊಟ್ಟಿಲ್ಲ ಅದಕ್ಕೂ ಕೂಡ ಒಂದು ಡೆಫನೇಷನ್ ಇದೆ, that investment has to be more than Rs. 100 crores and very selective industries will get it. ಹಾಗಾಗಿ ಮಾನ್ಯ ಸಿಂಧ್ಯಾರವರಿಗೆ ಭಯವೇನಿದೆ, ಎಂದರೆ ಇದನ್ನು ಎಲ್ಲಾ ಕೈಗಾರಿಕೆಗಳಿಗೆ ಕೊಡುತ್ತಾರೆನ್ನುವುದು ಸರಿಯಲ್ಲ ಅದನ್ನು ತಮ್ಮ ಗಮನಕ್ಕೆ ತರುತ್ತೀದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: - ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆ ತುಂಬಾ ಹಿಂದುಳಿದ ಪ್ರದೇಶ, ಕೆಜಿಎಫ್‌ನಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತಿದೆ, ಅಲ್ಲಿ ಪರ್ಯಾಯ ಕೈಗಾರಿಕೆಗಳನ್ನು ತರದಿದ್ದರೆ ಒಂದೂವರೆ ಲಕ್ಷ ಜನರು ಏನು ಮಾಡಬೇಕೆಂಬುದು ತಮಗೆ ಗೊತ್ತಿದೆ, ಅಲ್ಲಿ ನೀರಿದೆ, ಆ ನೀರನ್ನು ಪಂಪ್ ಮಾಡಿ ಏನಾದರೂ ಮಾಡುವುದಕ್ಕೆ ಸರ್ಕಾರಕ್ಕೆ ಸಲಹೆ ಕೊಟ್ಟಿದ್ದೀರೆಂದು ತಿಳಿದುಕೊಂಡಿದ್ದೇನೆ. ನಿಮ್ಮ ಸಲಹೆಯನ್ನಾದರೂ ಇವರು ತೆಗೆದುಕೊಂಡರೆ ರಾಜಕೀಯವಾಗಿಯೂ ಹಾಗೂ ಆರ್ಥಿಕವಾಗಿಯೂ ಸರ್ಕಾರದ ಮತ್ತು ಆಡಳಿತ ಪಕ್ಷದ ಆರೋಗ್ಯ ಸುಧಾರಣೆಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳುತ್ತಿದ್ದುದು ಅದನ್ನೇ, ಅದು ಅವರ ಬಾಯಲ್ಲಿಯೇ ಬಂತು, ಅದು ಯಾರದೇ ಕಾಲವಿರಲಿ, ಈ ಟಯೋಟಾ, ವೋಲ್‌ವೊ ಇನ್‌ಫೋಸಿಸ್ ಇವರೆಲ್ಲಾ ಗ್ರೀನ್ ಅಥವಾ ಯಲ್ಲೋ ಕಾರ್ಡ್ ಹೊಲ್ಡರ್ಗ್ಳೋ ಎಂಬುದು ನನಗೆ ಗೊತ್ತಿಲ್ಲ. ಗ್ರೀನ್ ಕಾರ್ಡ್ ಎಂದರೆ ನಮ್ಮ ಕಾಲದ್ದು, ಅಲ್ಲವೇ ಈಗ ಇನಾಂದರ್ ಹಾಗೂ ಎಸ್.ಎಂ. ಕೃಷ್ಣರವರ ಕಾಲದ್ದು ಯಲ್ಲೋ ಕಾರ್ಡ್. ಈ ಮೂರು ಜನ ಯಾವ ಕಾರ್ಡ್ ಹೋಲ್ಡರ್ಸ್ ಎಂಬುದು ಗೊತ್ತಿಲ್ಲ, ಇವರು ಬಡತನ ರೇಖೆಗಿಂತ ಕಡಿಮೆ ಇದ್ದಾರೋ ಮೇಲ್ಗಡೆ ಇದ್ದಾರೋ ಅಥವಾ ಬಡತನ ರೇಖೆಯ ಮೇಲೆಯೇ ನಡೆಯುತ್ತಿದ್ದಾರೋ ಗೊತ್ತಿಲ್ಲ. 1985 ರಿಂದಲೂ ಕೂಡ ಕೊಡುತ್ತಾ ಬಂದಿದ್ದೇವೆ. ಆದರೆ 1985 ರಿಂದ ಈ ರೀತಿ ಬ್ಲಾಂಕೇಟ್ ಆರ್ಡ್ರ್ ಮಾಡಿ, ಸರ್ವ ಅಧಿಕಾರವನ್ನು ತೆಗೆದುಕೊಳ್ಳುವ ಆಜ್ಞೆಯನ್ನು ಏತಕ್ಕೆ ಮಾಡಿಕೊಂಡಿರಲಿಲ್ಲ? ಇದು ಶ್ರೀಕಂಠಯ್ಯನವರಿಗೆ ಗೊತ್ತಾಗುವುದಿಲ್ಲ. ಅವರೊಂದು ರೀತಿ ಸಾಧು ಮನುಷ್ಯರು, ಕೈಗಾರಿಕೆಗಳ ಅಭಿವೃದ್ಧಿಯ ಹೆಸರಿನಲ್ಲಿ ಅವರ ಮೂಲಕ ಇದನ್ನು ತರಿಸುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಯಾವುದೇ ಇನ್‌ಸೆಂಟಿವ್ ಕೊಟ್ಟರೆ ಉಪಯೋಗವಾಗುವುದಿಲ್ಲವೆನ್ನುವ ಮಾತನ್ನೂ ಕೂಡ ಇವರು ಹೇಳಿದ್ದಾರೆ, ಸೇಲ್ಸ್‌ಟ್ಯಾಕ್ಸ್, ಸಬ್ಸಿಡಿ ಕೊಡುವುದಕ್ಕಾಗುವುದಿಲ್ಲವೆಂದು ಇವರು ಹೇಳುತ್ತಿದ್ದಾರೆ. ಪ್ರಾಮಾಣಿಕವಾಗಿ ನಾನು ಹೇಳುತ್ತಿದ್ದೇನೆ, ನಿಮ್ಮ ಕಾಲದಲ್ಲಿ ಅಷ್ಟೇ ಅಲ್ಲ, ಮುಂದೆ ಬರುವ ಸರ್ಕಾರಗಳಿಗೂ ಕೂಡ ದೊಡ್ಡ ಅನಾಹುತ ತರುವಂತಹ ಕೆಲಸ ಇದಾಗಿದೆ. ಸ್ಟ್ಯಾಂಪ್ ಡ್ಯೂಟಿ ಎಕ್ಸೆಂಪ್ಷನ ಕೊಡಲು ಹೊರಟಿದೆ, That is one of the important revenues ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ ಅಬಕಾರಿ ಇಲಾಖೆ, ಮೋಟರ್‌ವೆಹಿಕಲ್ ಇಲಾಖೆ, ನಾಲ್ಕನೆಯದಾಗಿ ಸ್ಟ್ಯಾಂಪ್ ಡ್ಯೂಟಿ ಮೂಲಕ ಪ್ರಮುಖವಾಗಿ ರಾಜ್ಯ ಸರ್ಕಾರಕ್ಕೆ ರೆವಿನ್ಯೂ ಬರುತ್ತದೆ. This is about Rs. 1000 crore of so. 1000 ಕೋಟಿಯಲ್ಲಿದ್ದು ಪ್ರಾಬಬಲಿ 250 ಕೋಟಿ ರೂ. ಎಂದು ನೀವು ಹೇಳುತ್ತಿದ್ದೀರಿ, ಇದನ್ನು ಯಾವ ಆಧಾರದ ಮೇಲೆ 250 ಕೋಟಿ ರೂ ಎಂದು ಲೆಕ್ಕಾ ಹಾಕಿದ್ದೀರಾ? ಬರೀ 250 ಕೋಟಿ ರೂ ಎಂದು ಹೇಗೆ ಹೇಳುತ್ತೀರಾ? ನಾಳೆ ಬೇರೆ ರಾಜ್ಯಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಕಷ್ಟವಾಯಿತೆಂದು ಇಟ್ಟುಕೊಳ್ಳೋಣ, ಈ

ಕಡೆಗೆ ಹೆಚ್ಚಿಗೆ ಕೈಗಾರಿಕೆಗಳು ಬರುತ್ತವೆಂದು ಇಟ್ಟುಕೊಳ್ಳೋಣ, ಬೆಂಗಳೂರು ಹಾಗೂ ಕರ್ನಾಟಕದಲ್ಲಿ ವಾತಾವರಣ ಚೆನ್ನಾಗಿದೆ ಎಂದು ಜನರು ಬರುತ್ತಾರೆಂದು ಇಟ್ಟುಕೊಳ್ಳೋಣ, it may go upto Rs. 3000 crores. ಹೋಗಲಿ ನಿಮ್ಮ ಕಾಲದಲ್ಲಿ ನಿಮಗೆ ಬೇಕಾಗಿರುವ ನಿಮ್ಮ ಸಹೋದರ ಸಹೋದರಿಯರಿಗೆ ಕೊಡಬೇಕೆಂದಿದ್ದರೆ ನಮ್ಮದೇನೂ ತಕರಾರಿಲ್ಲ, ಅದಕ್ಕೆ ಸಚಿವಸಂಪುಟದಲ್ಲಿ ಅವಕಾಶವಿದೆ, ಸಚಿವಸಂಪುಟಕ್ಕೆ ತಂದು ಅದನ್ನು ನೀವು ಮಾಡಿಕೊಳ್ಳಿ ನಮ್ಮದೇನೂ ತಕರಾರಿಲ್ಲ, ಆದರೆ ಬ್ಲಾಂಕೆಟ್ ಆರ್ಡರ್ ಅನ್ನು ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಬಹುಶಃ ಅವತ್ತಿನ ಸಚಿವಸಂಪುಟದ ಸಭೆಗೆ ಮಾನ್ಯ ಕಾಗೋಡುತಿಮ್ಮಪ್ಪನವರು ಗೈರುಹಾಜರಾಗಿದ್ದರೆಂದು ಕಾಣುತ್ತದೆ. ಮಾನ್ಯ ಖರ್ಗೆಯವರು ಗೈರು ಹಾಜರಾಗಿದ್ದರೂ ಏನೋ ಗೊತ್ತಿಲ್ಲ ಏಕೆಂದರೆ ಇಲ್ಲಿ ಯಾವುದೇ ಬಿಲ್ಲನ್ನು ತೆಗೆದುಕೊಂಡು ಬರಬೇಕಾದರೆ ಸಚಿವ ಸಂಪುಟದ ಮಂಜೂರಾತಿಯಾಗಿರುತ್ತದೆಂಬುದು ತಮಗೆ ಗೊತ್ತಿದೆ. ಅವತ್ತು ಇದರ ಇಂಪ್ಲಿಕೇಷನ್ಸ್ ಯೋಚನೆ ಮಾಡುವುದಕ್ಕೆ ಆಗದೆ ಇರಬಹುದು, ದಯವಿಟ್ಟು ಇದನ್ನು ಕರೀಕನ್‌ಸಿಡರ್ ಮಾಡಿ. This is not correct. ಈಗ ಮೇಲ್ಗಡೆಯಿಂದ ಬಹಳ ಒತ್ತಡ ಬಂದುಬಿಟ್ಟಿದೆ ಇನ್‌ಫೋಸಿಸ್‌ನವರಿಗೆ ಸ್ಟ್ಯಾಂಪ್ ಡ್ಯೂಟಿ ಎಕ್ಸ್ಂಪ್ಷನ್ ಕೊಟ್ಟೇ ಬಿಡಬೇಕು ವೋಲ್‌ವೊ ಕಂಪನಿಯವರು ಇನ್ನೊಂದು ಯುನಿಟ್ ಅನ್ನು ಬೀರೂರಿನಲ್ಲಿ ಹಾಕುತ್ತೇನೆಂದರೆ ಕೊಡುವುದಿದ್ದರೆ ಅವರಿಗೆ ಕೊಟ್ಟು ಬಿಡಿ ನಮ್ಮದೇನೂ ತರಕಾರೇನಿಲ್ಲ. ಆದರೆ ಒಂದು ರೀತಿ ಅಟಾರ್ನಿಜನರಲ್ ಇದ್ದಹಾಗೆ ಎಲ್ಲದಕ್ಕೂ ಕೂಡ ಇದರ ಕೆಳಗಡೆ ಶೆಲ್ಟರ್ ತೆಗೆದುಕೊಂಡು ಸಿಕ್ಕಸಿಕ್ಕವರಿಗೆ ನೀವು ಎಕ್ಸ್ಂಪ್ಷನ್ ಅನ್ನು ಕೊಡುವುದಕ್ಕೆ ಹೋಗಬೇಡಿ. ಅನೇಕ ಸಂದರ್ಭಗಳಲ್ಲಿ ಹುಲಿ ವೇಷದಲ್ಲಿ ನರಿಗಳು ಬರುತ್ತವೆ ಆಡಳಿತ ನಡೆಸುವ ಜನರ ಹತ್ತಿರ ಬಂದೂಕುಗಳನ್ನು ತೆಗೆದುಕೊಂಡು ಹುಲಿವೇಷದಲ್ಲಿ ನರಿಗಳು ಬರುತ್ತವೆ ನಾವು ಹುಲಿ ಎಂದು ತಿಳಿದು ಈ ನರಿಗಳ ಸಹವಾಸ ಮಾಡಿಬಿಡುತ್ತೇವೆ, ಇದು ಸರಿಯಲ್ಲ ಸ್ವಾಮಿ, ನಾವು ಅದನ್ನು ವಿರೋಧ ಮಾಡುತ್ತೇವೆ. ಇದನ್ನು ದಯಮಾಡಿ ಸರ್ಕಾರ ರೀಕನ್‌ಸಿಡರ್ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಎಚ್ಚರಿಸುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಈಗ ಸಿಂಧ್ಯಾರವರು ಬಹಳ ಒಳ್ಳೆಯ ಮಾತನ್ನು ಹೇಳಿದರು. ರಾಜ್ಯದ ಬೊಕ್ಕಸಕ್ಕೆ ಬರುವ ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್, ಅಬಕಾರಿ ಶುಲ್ಕ, ಎಂಟ್ರಿ ಟ್ಯಾಕ್ಸ್ ಇತ್ಯಾದಿ ತೆರಿಗೆಗಳ ಮೂಲಕ ಆದಾಯ ಬರುತ್ತದೆಂದು ಹೇಳಿದರು ಕೊಡುವವರು ಯಾರು? ಇಂಡಸ್ಟ್ರೀಸ್, ಟ್ರೇಡ್ ಅಂಡ್ ಅಗ್ರಿಕಲ್ಚರ್. ಯಾವ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆಯುತ್ತವೆ, ವ್ಯಾಪಾರ ಬೆಳೆಯುತ್ತದೆ, ಕೃಷಿ ಬೆಳೆಯುತ್ತದೆ, ಆ ರಾಜ್ಯ ಪ್ರಾಸ್ಪರ್ ಆಗುವುದಕ್ಕೆ ಸಾಧ್ಯ. ಸರ್ಕಾರದ ವತಿಯಿಂದ ದವಾ ಖಾನೆ, ಬ್ರಿಡ್ಜ್ ಇತ್ಯಾದಿ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುತ್ತೇವೆ, ಅದಕ್ಕೆ ಹಣ ಎಲ್ಲಿಂದ ಬರುತ್ತಿದೆ ಎಂದರೆ ಇಂಡಸ್ಟ್ರೀಸ್ ಟ್ರೇಡ್ ಅಂಡ್ ಅಗ್ರಿಕಲ್ಚರ್‌ನಿಂದ ಎಂಬುದನ್ನು ಮರೆಯಬಾರದು. ನಾವೇನು ಇವತ್ತು ಕೃಷ್ಣ ಸರ್ಕಾರದಿಂದ ಇನ್ ಸೆಂಟೀವ್ ಕೊಡುತ್ತಿದ್ದೇವೆ ಇದೇನೂ ಹೊಸದಾಗಿ ಮಾಡುತ್ತಿಲ್ಲ 25 ವರ್ಷದಿಂದ ಸಕ್ಸೆಸೀವ್ ಗೌರ್ನಮೆಂಟ್‌ಗಳು ಏನು ಮಾಡಿಕೊಂಡು ಬಂದಿವೆ ಅದನ್ನು ನಾವು ಮಾಡುತ್ತಿದ್ದೇವೆ, ಹೊಸದಾಗಿ ಏನೂ ಮಾಡುತ್ತಿಲ್ಲ, ನಿರ್ಧಿಷ್ಟವಾಗಿ ಕೆಲವು ಜನರಿಗೆ ಅನುಕೂಲವನ್ನು ಮಾಡಲೆಂದು ಈ ವಿಧೇಯಕವನ್ನು ತಂದಿಲ್ಲ. ಇದಕ್ಕೆ ರೂಲ್ಸ್‌ನಲ್ಲಿ ಪ್ರಾವಿಷನ್ ಮಾಡಿಕೊಂಡಿಲ್ಲ, Provision has been made in the Act. ಹಳೆಯ ಪಾಲಿಸಿಯ ಪ್ರಕಾರ 1996 ಮತ್ತು 2001ಕ್ಕೆ ಮಾತ್ರ.

Because of that according to them, it has been extended upto 2002. So,- there is necssity for amending the Act.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಇದಕ್ಕೆಲ್ಲಾ ಅಧಿಕಾರಿಗಳು ಶಿಫಾರಸ್ಸು ಮಾಡುವುದಿಲ್ಲ. ಇಂತಹವರಿಗೆ ಮಾಡಿ ಪರಿಶೀಲನೆ ಮಾಡಿ ಪುಟ್ ಅಪ್ ಮಾಡಿ ಎಂದು ಮಾಡಿ ಇವರು ಬರೆಯುತ್ತಾರೆ. ಆದರೆ ಅಧಿಕಾರಿಗಳು ಇಲ್ಲ ಇದು ಸಾಧ್ಯವಿಲ್ಲ ರೆವಿನ್ಯೂ ಲಾಸ್ ಆಗುತ್ತದೆಂಬುದು ಬರೆಯುವುದಿಲ್ಲ ಅದಕ್ಕೆ ಕನ್‌ವಿನಿಯೆನ್ಸ್ ಮಾಡಿ ಕೊಳ್ಳುವುದಕ್ಕೆ ಇದನ್ನು ಮಾಡಿರುವುದು, 25 ವರ್ಷಗಳಿಂದ ಕೊಟ್ಟಿಲ್ಲವೆಂದು ಯಾರು ಹೇಳಿದ್ದು ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು, ನಿಜಲಿಂಗಪ್ಪನವರ ಕಾಲದಲ್ಲಿ ಅಬಕಾರಿ ಮಂತ್ರಿಗಳಾಗಿದ್ದಾಗ, ಕೈಗಾರಿಕಾ ಮಂತ್ರಿಗಳಾದಾಗಿನಿಂದಲೂ ಇದನ್ನು ಕೊಟ್ಟು ಕೊಂಡೇ ಬಂದಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ:- ರಾಮಕೃಷ್ಣ ಹೆಗಡೆಯವರು ನಿಮ್ಮ ನಾಯಕರು, ನನಗಿಂತ ಕೈಗಾರಿಕೆಯಲ್ಲಿ ಪ್ರೋಗ್ರೆಸ್ಸೀವ್ ವ್ಯಕ್ತಿ, ಇನ್ನೂ ಹೆಚ್ಚು ಕೈಗಾರಿಕೆಗಳಿಗೆ ಕೊಡಬೇಕೆಂದು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ನಾಯಕರು ಅನ್ನುವುದರಲ್ಲಿ ನಿಮಗೆ ಅನುಮಾನ ಬೇಡ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಸಚಿವಸಂಪುಟಕ್ಕೆ ಅದು ಬಂದಾಗ ಸಿಂಧ್ಯಾರವರೆ ನೀವು ಗೈರುಹಾಜರಾಗಿರಬೇಕು, ಕಾಗೋಡು ತಿಮ್ಮಪ್ಪನವರಲ್ಲ. ಈಗ ಹಾಸನ ಮತ್ತು ಕಾರವಾರವನ್ನು ಕೇಂದ್ರ ಸರ್ಕಾರದವರು ಸ್ಪೆಷಲ್ ಇಂಡಸ್ಟ್ರಿಯಲ್ ಜೋನ್ ಎಂದು ಆಯ್ಕೆ ಮಾಡಿದ್ದಾರೆ, ಅಲ್ಲಿಗೆ ನಾವು ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ ಕೈಗಾರಿಕೆಗಳು ಬರುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ನೆ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಶ್ರೀ ಜಸವಂತ್‌ಸಿಂಗ್‌ರವರು ಯಾವ ಇನ್ ಸೆಂಟೀವ್ ಅನ್ನು ಹಣಕಾಸಿನ ಸಚಿವರಾಗಿ ಯಶವಂತ್ ಸಿನ್ಹಾರವರು ತಿರಸ್ಕರಿಸಿದ್ದರು insurance sector 5% tax and raising the tax limit/ from Rs. 10000 to Rs. 15000. ಮೊನ್ನೆ ಮೂರುದಿವಸಗಳ ಹಿಂದೆ ಪ್ರಕಟಣೆ ಮಾಡಿದರು,ಅದನ್ನು ಏತಕ್ಕೆ ಮಾಡಿದರೆಂದು ಕೇಳಿದರೆ, ಮಾಡಿದ ನಿರ್ಧಾರ ಸರಿ ಇದೆ. ಏಕೆಂದರೆ ನಿಮಗೆ ಇನ್‌ವೆಸ್ಟ್‌ಮೆಂಟ್ ಬರಬೇಕಾದರೆ ಮಧ್ಯಮವರ್ಗದ ಜನರ ಕೈಯಲ್ಲಿ ಹೆಚ್ಚು ಹಣ ಉಳಿತಾಯವಾಗಬೇಕು. ಹಾಗಾಗಿ ಒಳ್ಳೆಯ ವಿಚಾರದಿಂದ ಅದನ್ನು ಮಾಡಿದ್ದಾರೆ ಕೇಂದ್ರ ಸರ್ಕಾರ ಎಕ್ಸ್‌ಪೋರ್ಟ್ ಓರಿಯಂಟೆಡ್ ಇಂಡಸ್ಟ್ರೀಸ್‌ಗೆ ಶೇಕಡ 100 ರಷ್ಟು ಟ್ಯಾಕ್ಸ್ ಎಕ್ಸೆಂಪ್ಸ್‌ನ್ ಕೊಡುತ್ತಿದೆ, ಅದನ್ನು ಏತಕ್ಕೆ ಕೊಡುತ್ತಿದ್ದಾರೆಂದು ಕೇಳಿದರೆ ಹೇಗೆ? ಕಳೆದ ಸಾಲಿನ ಕೇಂದ್ರ ಸರ್ಕಾರದ export ನೆಗೆಟಿವ್, 0.1% negative growth. Luckily, first Quarter ನಲ್ಲಿ Government of India shown the progress 13%. ಆದರೆ, ನಿಮ್ಮೆಲ್ಲರ ಸಹಕಾರದಿಂದ 2001ರಲ್ಲಿ ಕರ್ನಾಟಕದ ಎಕ್ಸ್‌ಪೋರ್ಟ್ 16,000 ಕೋಟಿ ರೂ.ಗಳಷ್ಟಾಗಿದೆ. ಈ ವರ್ಷ, ಅಂದರೆ ಮಾರ್ಚ್ 2002ಕ್ಕೆ ನಮ್ಮ ಎಕ್ಸ್‌ಪೋರ್ಟ್ 20,000 ಕೋಟಿ ರೂಪಾಯಿಗಳಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರ ಸರ್ಕಾರದ ಎಕ್ಸ್‌ಪೋರ್ಟ್ ನೆಗೆಟೀವ್ ಗ್ರೋತ್ ಇದ್ದರೆ, ಕರ್ನಾಟಕದ ಎಕ್ಸ್‌ಪೋರ್ಟ್ ಗ್ರೋತ್ ಶೇ. 25 ರಷ್ಟಿದೆ. ಆದ್ದರಿಂದ, ನಾವು ಕೈಗಾರಿಕೆಗಳು ಬೆಳೆಯಲು, ವ್ಯಾಪಾರ ಬೆಳೆಯಲು, ಕೃಷಿ ಬೆಳೆಯಲು ಉತ್ತೇಜನ ಕೊಡಬೇಕು.

ಇವತ್ತು ಅವುಗಳಿಗೆ ಯಾವುದೇ ಇನ್ಸೆಂಟೀವ್ ಉಳಿದಿಲ್ಲ. ಮೈನ್ ಇನ್ಸೆಂಟೀವ್ ಇದ್ದದ್ದು ಸೇಲ್ಸ್ ಟ್ಯಾಕ್ಸಿನದ್ದು. ಅದನ್ನು ತೆಗೆದುಬಿಟ್ಟಿದ್ದೇವೆ. ನಾವು ಮಾತ್ರವಲ್ಲ, ಇಡೀ ದೇಶದಲ್ಲಿ ತೆಗೆದುಬಿಟ್ಟಿದ್ದಾರೆ. ಹಾಗಾಗಿ, 250 ಕೋಟಿ ರೂ. ಎಂದು ನಾವು ಹೇಳಿರುವುದು ಪ್ರಾಬಬಲ್ ಮಾತ್ರ. ಇಷ್ಟೇ ಎಂದು ನಿಖರವಾಗಿ ಹೇಗೆ ಹೇಳಲು ಸಾಧ್ಯ? ಆರು ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳು ಬರುತ್ತವೆ ಎನ್ನುವುದನ್ನು ಯಾರು ಹೇಳಲು ಸಾಧ್ಯ? ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಹಾಗಾಗಿ ಇದನ್ನು ಅಂದಾಜು ಮಾಡಿದ್ದಾರಷ್ಟೇ. ಇಷ್ಟೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ ಮುಂದಿನ ಐದು ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳು ಬರಬಹು, ಮಾರುಕಟ್ಟೆಯಲ್ಲಿ ದರ ಹೇಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಹಾಗಾಗಿ, ಇದೇನೂ ದೊಡ್ಡ ಭಾರವಲ್ಲ. ಕೈಗಾರಿಕೆಗಳು ಬೆಳೆಯಬೇಕು ಎನ್ನುವ ಉದ್ದೇಶದಿಂದ ಮಾಡಲಾಗಿದೆ. ಆದ್ದರಿಂದ, ಇದಕ್ಕೆ ತಾವೆಲ್ಲರೂ ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:- ಈಗ ನೀವು ತರುತ್ತಿರುವ ಅಮೆಂಡ್‌ಮೆಂಟ್‌ನಲ್ಲಿ ಏನಿದೆ ಎಂದರೆ,

> " Provided further that the State Government may in public interest reduce or remit by notification till 31st March 2006, the stamp duty payable on any instrument, to be specified therein executed by, specified Tiny, Small Scale, Medium Scale or Large Scale Industrial Units or Mega projects as defined in the new industrial policy vide G.O. CI 167 SPI 2001, dated 30.6.2001 or by such key projects of core area as defined in the said policy or specified by the State Government from time to time."

ಟೈಂ ಟು ಟೈಂ ಎಂದು ನೀವು ಹೇಳಿದ್ದೀರಲ್ಲಾ. ಇದರ ಬಗ್ಗೆ ನಮಗೆ ಸಂಶಯ ಬರುತ್ತಿದೆ. ನಿಮಗೆ ಯಾರ ಬಗ್ಗೆ ಇಂಟರೆಸ್ಟ್ ಇದೆ, ಯಾವ ಪ್ರಾಜೆಕ್ಟ್ ಬಗ್ಗೆ ಇಂಟರೆಸ್ಟ್ ಇದೆ ಅವರಿಗೆ ಸ್ಟ್ಯಾಂಪ್ ಡ್ಯೂಟಿ ಎಕ್ಷಂಪ್‌ಷನ್ ಕೊಡುತ್ತೀರಿ. ಯಾವುದೋ ಒಂದು ಮೇಗಾ ಇಂಡಸ್ಟ್ರಿ ಬರುತ್ತದೆ ಎಂದು ಇಟ್ಟುಕೊಳ್ಳಿ. ಅವರಿಗೆ ನೀವು 100-200ಕೋಟಿ ರೂಪಾಯಿಗಳ ಸ್ಟ್ಯಾಂಪ್ ಡ್ಯೂಟಿ ಎಕ್ಷಂಪ್‌ಷನ್ ಕೊಟ್ಟು ಬಿಡುತ್ತೀರಿ. ಎಲ್ಲಿ ರಾಜ್ಯ ಸರ್ಕಾರಕ್ಕೆ ಇಂಟರೆಸ್ಟ್ ಇದೆ. ಎಲ್ಲಿ ವ್ಯವಹಾರಗಳು ಆಗುತ್ತವೆ, ಅಂಥ ಕಡೆ ಎಕ್ಷಂಪ್‌ಷನ್ ಕೊಡುವಂಥಾದ್ದು ಆಗುತ್ತದೆ. ಕೋರ್ ಏರಿಯಾ ಎಂದು ತಾವು ಹೇಳುತ್ತಿದ್ದೀರಿ. ಕೋರ್ ಏರಿಯಾಗಳಿಗೆ ಡಿಫರೆನ್ಸ್ ಅನ್ನು ನೀವು ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಮಾಡಿದ್ದೀರಿ. ಎಲ್ಲಿ ಇಂಡಸ್ಟ್ರಿಗಳು ಬೆಳೆದಿವೆ ಅದನ್ನು ಬಿಟ್ಟು, ಬಿಜಾಪುರ, ಬಾಗಲಕೋಟೆಗಳಂಥ ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಸ್ಟ್ಯಾಂಪ್ ಡ್ಯೂಟಿ ಎಕ್ಸಂಪ್‌ಷನ್ ಕೊಡುವಂಥಾದ್ದನ್ನು ಮಾಡಬೇಕು. ಮತ್ತೆ ನೀವು ಬೆಂಗಳೂರಿನಲ್ಲೇ ಸ್ಟ್ಯಾಂಪ್ ಡ್ಯೂಟಿ ಎಕ್ಷಂಪ್‌ಷನ್ ಕೊಟ್ಟರೆ ಅದರಿಂದ ಪ್ರಯೋಜನವೇನು? ನೀವು ಏನು ಸಾಧನೆ ಮಾಡಿದ ಹಾಗೆ ಆಗುತ್ತದೆ? ಕೈಗಾರಿಕೆಗಳು ಬೆಳೆಯುವಂಥಾದ್ದು ಇಡೀ ರಾಜ್ಯಕ್ಕೆ ಸ್ಪ್ರೆಂಡ್ ಆಗಬೇಕು. ಆ ರೀತಿಯ ನಿರ್ಣಯಗಳನ್ನು ತಾವು ತೆಗೆದುಕೊಳ್ಳಿ. ಅದನ್ನು ಬಿಟ್ಟು ಮತ್ತೆ ಬೆಂಗಳೂರಿಗೇ

ಕೊಡುವಂಥಾದ್ದು, ಬೆಂಗಳೂರಿನಲ್ಲೇ ಕೈಗಾರಿಕೆಗಳು ಬೆಳೆಯುವಂಥಾದ್ದು ಆಗಬಾರದು. ಅಲ್ಲಿ ಬರುವ ಯಾವುದೋ ಒಂದು ಮೆಗಾ ಇಂಡಸ್ಟ್ರಿಗೆ ನೂರಾರು ಕೋಟಿ ರೂಪಾಯಿಗಳ ಸ್ಟ್ಯಾಂಪ್ ಡ್ಯೂಟಿ ಎಕ್ಷಂಪ್‌ಷನ್ ಕೊಡುವಂಥಾದ್ದು ಆಗಬಾರದು. ಕೋಕಾಕೋಲಾ ಕಂಪನಿಗೆ 7 ವರ್ಷಗಳ ಕಾಲ ಸೇಲ್ಸ್ ಟ್ಯಾಕ್ಸ್ ಎಕ್ಷಂಪ್‌ಷನ್ ಮತ್ತು 200 ಕೋಟಿ ರೂಪಾಯಿಗಳಷ್ಟು ಸ್ಟ್ಯಾಂಪ್ ಡ್ಯೂಟಿ ಎಕ್ಷಂಪ್‌ಷನ್ ಕೊಟ್ಟಿದ್ದೀರಿ. ಸೇಲ್ಸ್ ಟ್ಯಾಕ್ಸ್ ಎಕ್ಷಂಪ್‌ಷನ್ ಕೊಡುವುದಿಲ್ಲ ಎಂದು ತಾವು ಹೇಳಿದಿರಿ. ಎಂ ಆರ್ ಪಿ ಎಲ್ ಗೆ 11 ವರ್ಷಗಳ ಕಾಲ ಟ್ಯಾಕ್ಸ್ ಎಕ್ಷಂಪ್‌ಷನ್ ಅಂದರೆ ಟ್ಯಾಕ್ಸ್ ಹಾಲಿಡೇ ಕೊಟ್ಟಿದ್ದೀರಿ. ಕೋಕಾಕೋಲಾ ಕಂಪನಿಗೆ ಏಳು ವರ್ಷಗಳ ಕಾಲ ಕೊಟ್ಟಿದ್ದೀರಿ. ಅಂದರೆ ಸುಮಾರು 200-300 ಕೋಟಿ ರೂಪಾಯಿಗಳು ಇಲ್ಲೇ ಹೋಯಿತು. ಆಗಲೇ ಸಿಂಧ್ಯಾರವರು ಹೇಳಿದರು, ರೈತರಿಗೆ 200-300 ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಮನ್ನಾ ಮಾಡಿ ಎಂದರೆ ನಿಮಗೆ ಆ ಬರ್ಡನ್ ಅನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಆದರೆ ಇಲ್ಲಿ ಇವತ್ತು ನೀವು 250 ಕೋಟಿ ರೂಪಾಯಿಗಳ ಬರ್ಡನ್ ತೆಗೆದುಕೊಳ್ಳಲು ತಯಾರಿದ್ದೀರಿ. 250 ಕೋಟಿ ರೂ ಎನ್ನುವುದೂ ಸಹ ಪ್ರಾಬಬಲ್ ಅದು 500 ಕೋಟಿ ರೂ. ಆಗಬಹುದು. 1000 ಕೋಟಿ ರೂ. ಸಹ ಆಗಬಹುದು. ಆದ್ದರಿಂದ, ಇದನ್ನು ಇಂಡಸ್ಟ್ರಿಯಲಿ ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಎಂದು ಸ್ಪೆಸಿಫಿಕ್ ಮಾಡಿದ್ದರೆ ಒಳ್ಳೆಯದಿತ್ತು. ಕೋರ್ ಏರಿಯಾಗಳು ಎಂದರೆ ಇಂಪಾರ್ಟೆಂಟ್ ಏರಿಯಾಗಳು ಎಂದಾಗುತ್ತದೆ. ಇಂಪಾರ್ಟೆಂಟ್ ಏರಿಯಾ ಎಂದರೆ ಮತ್ತೆ ಅದು ಬೆಂಗಳೂರು ಎಂದೇ ಆಗುತ್ತದೆ. "Said policy or specified by the State Government from time to time" ಈ ಡೆಫನಿಷನ್‌ಅನ್ನು ಅರ್ಥಮಾಡಿಕೊಂಡರೆ, ನಿಮಗೆ ಯಾರ ಬಗ್ಗೆ ಇಂಟರೆಸ್ಟ್ ಇದೆ ಅಂಥವರಿಗೇ ಕೊಡುವಂಥಾದ್ದು ಆಗುತ್ತದೆ ಎಂದು ತಿಳಿಯುತ್ತದೆ. ಇಲ್ಲಿ ಒಳ ವ್ಯವಹಾರಗಳನ್ನು ಮಾಡಲೂ ಸಾಧ್ಯವಿದೆ. ಆದ್ದರಿಂದ, ಇಲ್ಲಿ ಬೋನಾಫೈಡ್ ಆಗಿ ಆಗುವುದಿಲ್ಲ. ನಿಜವಾಗಿ ಯಾರಿಗೆ ಇದರ ಬೆನಿಫಿಟ್ ಕೊಡಬೇಕು. ಅವರಿಗೆ ಇದು ಮುಟ್ಟಲು ಆಗುವುದಿಲ್ಲ. ಅದಕ್ಕಾಗಿ ನಾವು ಇದನ್ನು ವಿರೋಧ ಮಾಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಶೇಕಡ 50 ಕ್ಕಿಂತ ಹೆಚ್ಚು ಸ್ಟ್ಯಾಂಪ್ ಡ್ಯೂಟಿ ಏಕ್ಷಂಪ್‌ಷನ್ ಅನ್ನು ಯಾರಿಗೂ ಕೊಡಲು ಆಗುವುದಿಲ್ಲ ಎನ್ನುವುದನ್ನು ತಾವು ಕೈಗಾರಿಕಾ ನೀತಿಯನ್ನು ನೋಡಿದಾಗ ತಮಗೆ ಕಂಡುಬರುತ್ತದೆ. ಈ ಮಸೂದೆ ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುತ್ತದೆ. ಇದು ಕೇವಲ ಯಾವುದೋ ಒಂದು ಕೈಗಾರಿಕೆಗೆ ಅಥವಾ ಒಂದು ಭಾಗಕ್ಕೆ ಸಿಮೀತವಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಇಡೀ ರಾಜ್ಯಕ್ಕೆ ಜನರಲ್ ಅಪ್ಲಿಕೇಷನ್ ಆಗುತ್ತದೆ ಎನ್ನುವ ಬಗ್ಗೆ ಡಿಸಿಷನ್ ತೆದುಕೊಳ್ಳಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅಪ್ಲಿಕಬಲ್ ಆಗುತ್ತದೆ. Core sector definition -- ಪ್ರಕಾರ ಅದು ಹುಬ್ಬಳ್ಳಿಯಲ್ಲಿ ಬಂದರೂ ಅದಕ್ಕೆ ಸಿಗಬೇಕು, ಗುಲ್ಬರ್ಗಾದಲ್ಲಿ ಬಂದರೂ ಸಿಗಬೇಕು. ಉದಾಹರಣೆಗಾಗಿ ಹೇಳುತ್ತೇನೆ, ತಾವು ಬೇಜಾರು ಮಾಡಿ ಕೊಳ್ಳಬಾರದು. ಕೇಂದ್ರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳ ಎಕ್ಸ್‌ಪೋರ್ಟ್ ಇನ್ಸ್‌ಂಟೀವ್ ಕೊಡುತ್ತದೆ.

It has benefited the export-oriented industries

ಇದು ಸರಿಯೇ ಎಂದು ಕೇಳಿದರೆ ತಪ್ಪಾಗುತ್ತದೆ. ಅದನ್ನು ನಾನು ಕೇಳುವುದಿಲ್ಲ. ಅವರು ಅದನ್ನು ಮಾಡಿದ್ದು ಸರಿಯಾಗಿದೆ. In 1978 Chinas exports was 0.75% of the world exports. By 1990 their exports rose to 4% of the world exports.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಮ್ಮನ್ನು ನಾನು ಕಂಗ್ರಾಜುಲೇಟ್ ಮಾಡುತ್ತೇನೆ. ನೀವು ಕೇವಲ ಇಂಡಸ್ಟ್ರೀಸ್ ಮಿನಿಸ್ಟರ್ ಎಂದು ನಾನು ಅಂದುಕೊಂಡಿದ್ದೆ. ನೀವು ಎಕ್ಸ್‌ಪೋರ್ಟ್-ಇಂಪೋರ್ಟ್ ಇಲಾಖೆಗಳನ್ನೂ ನೋಡಿಕೊಳ್ಳುವ ಹಾಗೆ ಕಾಣುತ್ತದೆ. ಕರ್ನಾಟಕಕ್ಕೆ ಒಂದು ಹೊಸ ಎಕ್ಸ್‌ಪೋರ್ಟ್ ಪಾಲಿಸಿ ಮಾಡುತ್ತೇನೆ ಎಂದು ನೀವು ಎಲ್ಲೋ ಒಂದು ಕಡೆ ಹೇಳಿಕೆ ಕೊಟ್ಟಿದ್ದೀರಿ ಒಂದು ವರ್ಷಕ್ಕೆ ನೀವು ಎಷ್ಟು ಹೊಸಹೊಸ ಪಾಲಿಸಿಗಳನ್ನು ಮಾಡುತ್ತೀರಿ? ಆ ಹೊಸ ಎಕ್ಸ್‌ಪೋರ್ಟ್ ಪಾಲಿಸಿ ಯಾವುದು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೇಳಲು ಬಯಸುತ್ತೇನೆ. ಆ ಹೊಸ ಎಕ್ಸ್‌ಪೋರ್ಟ್ ಪಾಲಿಸಿ ಇದೇ ಏನು?

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, India's exports are less than 1% compared to the world exports. ಇಷ್ಟು ಒಳ್ಳೆಯ ಮಾನವ ಸಂಪನ್ಮೂಲಗಳನ್ನು, ಇಷ್ಟೊಂದು ರಿಸೋರ್ಸಸ್‌ಗಳನ್ನು ಇಟ್ಟುಕೊಂಡು ನಾವು ಎಕ್ಸ್‌ಪೋರ್ಟ್‌ನಲ್ಲಿ ಬಹಳ ಹಿಂದೆ ಇದ್ದೇವೆ. ಆದರೆ, China in 12 years from 1978 to 1990 they have gone upto 4% of the world exports. Government of India says by 2007 we will try to reach 1%. Its goal is 1% of the world trade by 2007.

ಹಾಗಾಗಿ, ಇವತ್ತು ಎಕ್ಸ್ ಪೋರ್ಟ್ ಸಲುವಾಗಿ ಕೇಂದ್ರ ಸರ್ಕಾರ ಮಾಡುತ್ತಿರುವ ಸಹಾಯವನ್ನು ತಪ್ಪು ಎಂದು ಹೇಳಲು ಆಗುವುದಿಲ್ಲ. ನೂರಾರು ಕೋಟಿ ರೂಪಾಯಿಗಳ ಇನ್ಸೆಂಟೀವ್‌ಗಳನ್ನು ಕೊಡುತ್ತಿದ್ದಾರೆ. Because exports have to grow and foreign exchange has to come. ಅದೇ ರೀತಿ ರಾಜ್ಯ ಸರ್ಕಾರವೂ ಸಹ ರಾಜ್ಯದಲ್ಲಿ ಎಕ್ಸ್‌ಪೋರ್ಟ್ ಬೆಳೆಯಲು ಉತ್ತೇಜನ ನೀಡುವ ಸಲುವಾಗಿ ಇದನ್ನು ಮಾಡುತ್ತಿದೆ. ಹೊಸ ಎಕ್ಸ್‌ಪೋರ್ಟ್ ಪಾಲಿಸಿ ಯಾವುದು ಎಂದು ಸಿಂಧ್ಯಾರವರು ಕೇಳಿದರು. ಹೊಸ ಎಕ್ಸ್‌ಪೋರ್ಟ್ ಬಿಲ್ ತರುತ್ತೇವೆ. ಆಗ ನಾನು ಸಿಂಧ್ಯಾರವರಿಗೆ ಉತ್ತರವನ್ನು ಕೊಡುತ್ತೇನೆ. ಅವರು ಅದಕ್ಕೆ ತಮ್ಮ ಸಲಹೆಗಳನ್ನೂ ಕೊಡಬಹುದು. ನಾವು ಇನ್ನೂ ಆ ಪಾಲಿಸಿಯನ್ನು ಮಾಡಿಲ್ಲ. ಅದಕ್ಕೆ ಒಳ್ಳೆಯ ಸಲಹೆಗಳ ಅವಶ್ಯಕತೆ ಇದೆ. ಕೋರ್ ಪ್ರಾಜೆಕ್ಟ್ ಎಂದರೆ ಸ್ಪೆಸಿಫೈಡ್ ಪ್ರಾಜೆಕ್ಟ್ ಎಂದು ಅರ್ಥ For example: Food Processing industries. Value-addition has to take. ಇವತ್ತು ರೈತ ಬೆಳೆಯುವಂಥ ಬೆಳೆಗೆ ಬೆಲೆ ಇಲ್ಲ. ಏಕೆಂದರೆ ಫುಡ್ ಪ್ರೋಸೆಸಿಂಗ್ ಕೈಗಾರಿಕೆಗಳು ಕಡಿಮೆ ಇವೆ. ಬೆಳೆ ಹೆಚ್ಚುತ್ತಿಲ್ಲ. ಆದ್ದರಿಂದ ಹೇಳುತ್ತಿದ್ದೇನೆ, ಇದರ ಬಗ್ಗೆ ಯಾವುದೇ ಸಂದೇಹ ಇರಬಾರದು. ಇದು ಹೊಸ ಲೆಜಿಸ್ಲೇಷನ್ ಅಲ್ಲ. Because the amended period is over, he is bringing an amendment.

Mr. Speaker:- Is there anything new other then what other members have raised?

ಶ್ರೀ ಶಿವಾನಂದ ಎಸ್ ಪಾಟೀಲ್:- ನೋಡಿ, ಕೈಗಾರಿಕಾ ಮಂತ್ರಿಗಳು ಆಗಲೇ ಹೊರಟುಬಿಟ್ಟರು. ಬೇಡಿಕೆಗಳ ಮೇಲೆ ಮಾತನಾಡುವಾಗಲೂ ಅವರು ಇರಲಿಲ್ಲ. ಈಗ ಇದನ್ನು ಶ್ರೀಕಂಠಯ್ಯನವರಿಗೆ ಹಚ್ಚಿ ಮತ್ತೆ ಹೊರಗೆ ಹೋಗುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ:- ಇಲ್ಲ ನಾನು ಹೋಗುತ್ತಿಲ್ಲ. ಬಿಲ್ ಅವರದ್ದು, ಕೈಗಾರಿಕೆ ನಮ್ಮದು ಅಷ್ಟೇ.

ಶ್ರೀ ಶಿವಾನಂದ ಎಸ್ ಪಾಟೀಲ್:- ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ನಾವೂ ನಿಮ್ಮ ಭಾಷಣವನ್ನು ಸ್ವಲ್ಪ ಕೇಳಬೇಕಾಗಿದೆ. ಈ ಬಿಲ್ ನಿಮ್ಮದೇ ಆಗಿದೆ. ಹೆಸರಷ್ಟೇ ಶ್ರೀಕಂಠಯ್ಯನವರದಿದೆ. ದೇಶಪಾಂಡೆಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಈಗ ನೀವು ವರ್ಲ್ಡ್ ಟ್ರೇಡ್ ಬಗ್ಗೆ ಹೇಳುತ್ತಿದ್ದೀರಿ, ಇಂಡಿಯನ್ ಎಕ್ಸ್‌ಪೋರ್ಟ್ ಬಗ್ಗೆ ಹೇಳುತ್ತಿದ್ದೀರಿ. I totally differ with your figures and I can prove it also.
ಆದರೆ ನಿಮ್ಮ ಇಂಡಸ್ಟ್ರಿಯಲ್ ಪಾಲಿಸಿ ಹೇಗೆ ಆಗುತ್ತಿದೆ ಎಂದು ಹೇಳುತ್ತೇನೆ. ಫುಡ್ ಪ್ರೋಸ್‌ಸಿಂಗ್‌ಗೆ ಪ್ರೈಯಾರಿಟಿ ಕೊಡಬೇಕು ಎಂದು ನೀವು ಮಾತನಾಡುವಾಗ ಕೊನೆಯಲ್ಲಿ ಹೇಳಿದಿರಿ ಫುಡ್ ಪ್ರೋಸೆಸಿಂಗ್‌ಗೆ ಪ್ರೈಯಾರಿಟಿ ಕೊಡಿ. ನಾವು ಬೇಡ ಎನ್ನುವುದಿಲ್ಲ. ಆದರೆ, ಎಲ್ಲಿ ಹಣ್ಣುಗಳೇ ಬೆಳೆಯುವುದಿಲ್ಲ ಅಂಥ ಕಡೆಗೆ ಫುಡ್ ಪ್ರೋಸೆಸಿಂಗ್ ಫ್ಯಾಕ್ಟರಿಗಳು ಹೋಗುತ್ತಿವೆ. ಅದರ ಬಗ್ಗೆ ನೀವು ಗಮನ ಹರಿಸಿರುವಿರೇನು? ಇಡೀ ರಾಜ್ಯದಲ್ಲಿ ಹೆಚ್ಚು ಹಣ್ಣುಹಂಪಲುಗಳನ್ನು ಬೆಳೆಯತಕ್ಕಂಥ ಜಿಲ್ಲೆ ಯಾವುದು ಎಂದು ನೀವೇ ಹೇಳಿ. ಇದಕ್ಕೆ ಉತ್ತರ ಹೇಳಿ. ನಂತರ ನಾನು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಬಾಗಲಕೋಟೆಯಲ್ಲಿ ಕೇಂದ್ರ ಸರ್ಕಾರದ ಸಹಕಾರದಿಂದ ಫುಡ್ ಪ್ರೋಸೆಸಿಂಗ್ ಪಾರ್ಕ್ ಮಾಡಲಾಗಿದೆ. ರಾಜ್ಯದಲ್ಲಿ, ಬಾಗಲಕೋಟೆ, ಮಾಲೂರು, ಮದ್ದೂರು, ಜೇವರ್ಗಿ, ಬೆಳಗಾವಿ, ಚಿತ್ರದುರ್ಗ ಈ ಆರು ಕಡೆಗಳಲ್ಲಿ ರೈತರಿಗೆ ಅನುಕೂಲವಾಗಬೇಕು, ಕೈಗಾರಿಕೆಗಳು ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಫುಡ್ ಪ್ರೋಸೆಸಿಂಗ್ ಫ್ಯಾಕ್ಟರಿಗಳನ್ನು ಮಾಡಿದ್ದೇವೆ. ನೀವು ಹೇಳಿದ್ದು ಸರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಬೆಳೆಯುವಂಥ ದ್ರಾಕ್ಷಿ, ದಾಳಿಂಬೆ, ನಿಂಬೆಹಣ್ಣು ಇತ್ಯಾದಿಗಳ ರಕ್ಷಣೆಗಾಗಿ ಬಾಗಲಕೋಟೆಯಲ್ಲಿ ನಾವು ಮಾಡುತ್ತಿದ್ದೇವೆ. ಈಗಾಗಲೇ ಇಲ್ಲಿ ಕೆಲಸ ಪ್ರಾರಂಭವಾಗಿದೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಮಾಲೂರಿನಲ್ಲಿ ದ್ರಾಕ್ಷಿ, ದಾಳಿಂಬೆ, ಹಿಪ್ಪುನೇರಳೆ ಬೆಳೆಯುತ್ತಾರೇನು?

ಅಧ್ಯಕ್ಷರು:- ತಾವು ಒಂದು ನಿಮಿಷ ತಡೆಯಿರಿ. ಕೋಲಾರ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆಗಳಲ್ಲಿ ಮಾವಿನಗಿಡಗಳಿವೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ನಾನು ನಿಮಗೆ ಕಂಗ್ರಾಚ್ಯುಲೇಟ್ ಮಾಡುತ್ತೇನೆ. ಇವತ್ತು ಬಹಳ ಚೆನ್ನಾಗಿ ಹೇಳಿದ್ದೀರಿ. ದೇಶಪಾಂಡೆಯವರ ಪರ ಹೋಗುತ್ತೀರೆನೋ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಆರ್.ವಿ. ದೇಶಪಾಂಡೆ:- ಕೇವಲ ಮಾಲೂರಿನಲ್ಲಿ ಅಲ್ಲ. ಫುಡ್ ಪ್ರೋಸೆಸಿಂಗ್ ಎಂದರೆ ಪ್ಯಾಡಿ, ಜೋಳ, ಎಲ್ಲಾ ಇರಬಹುದು.

ಶ್ರೀ ಶಿವಾನಂದ ಎಸ್ ಪಾಟೀಲ್:- ಜೇವರ್ಗಿಯಲ್ಲಿ ಹಣ್ಣು ಬೆಳೆಯುತ್ತಾರೆಯೇ? ಮಾನ್ಯ ಖರ್ಗೆ ಧರ್ಮಸಿಂಗ್‌ರವರು ಇದ್ದಾರೆ, ಹೇಳಲಿ?

ಶ್ರೀ ಆರ್.ವಿ. ದೇಶಪಾಂಡೆ:- ಫುಡ್ ಪ್ರೋಸೆಸಿಂಗ್ ಎಂದರೆ ಫ್ರೂಟ್ಸ್ ಅಷ್ಟೇ ಅಲ್ಲ. ಚಿಲ್ಲಿ ಫ್ರೂಟ್ಸ್, ವೆಜಿಟಬಲ್ಸ್, ಜೋಳ, ಪ್ಯಾಡಿ,ವೀಟ್ ಇರಬಹುದು. ಅದರಿಂದ ಏನೇನು ಪ್ರಾಡೆಕ್ಟ್ ಮಾಡಲಿಕ್ಕೆ ಸಾಧ್ಯ, ಎಂಬುದನ್ನು ಫುಡ್ ಪ್ರೋಸೇಸಿಂಗ್ ಇಂಡಸ್ಟ್ರಿ ಮಾಡುತ್ತದೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ನಾನು ದೇಶಪಾಂಡೆಯವರಿಗೆ ಮರ್ಯಾದೆ ಕೊಟ್ಟು ಹೇಳುತ್ತೇನೆ. ಪ್ಯಾಡಿ ಮತ್ತು ತೋರ್‌ದಲ್ ಅನ್ನು ಫುಡ್ ಪ್ರೋಸೆಸಿಂಗ್‌ಗೆ ಹಾಕುವುದಿಲ್ಲ. ತೊಗರಿ ಬೆಳೆಯನ್ನು ಫುಡ್ ಪ್ರೋಸೆಸಿಂಗ್‌ಗೆ ಹಾಕುತ್ತಾರೆಯೇ? ಇದನ್ನು ನಾನು ನೊಂದು ಹೇಳುತ್ತಿದ್ದೇನೆ. ಇದೇ ರಾಜ್ಯದಲ್ಲಿ ಅತಿ ಹೆಚ್ಚಿನ ಹಣ್ಣು-ಹಂಪಲು ಬೆಳೆಯುವ ಜಿಲ್ಲೆ ಎಂದರೆ ಬಿಜಾಪುರ. ನೀವು ಮಾಡಿದ ತಪ್ಪಿನಿಂದ ನಾವು ಅನುಭವಿಸುತ್ತಿದ್ದೇವೆ. ಅದು 6ರಲ್ಲಿ ಆರೂ ಆಗಿರಲಿಲ್ಲ. ಮೊದಲು ಮೂರು ಆಗಿತ್ತು. ಆಗ ಬಾಗಲಕೋಟೆ ಮದ್ದೂರು ಮತ್ತು ಇನ್ನೊಂದು ಕಡೆ ಆಯಿತು. ಆಗ ನಾನು ಮುಖ್ಯಮಂತ್ರಿಗಳಿಗೆ ಹೇಳಿದ್ದೆ. ಅವರು ಅಸೆಂಬ್ಲಿಯಲ್ಲಿ ರಿಪ್ಲೈ ಕೊಡುವಾಗ ನಾನು ಒಂದು ಚೀಟಿ ಕೊಟ್ಟೆ, ಅವರು ನನಗೆ ಕನ್‌ವಿನ್ಸ್ ಮಾಡಿ, ನಾವು ಮಂಡ್ಯ, ಮದ್ದೂರಿನಲ್ಲಿ ಹಣ್ಣು ಬೆಳೆಯುವುದಿಲ್ಲ, ರಾಜಕಾರಣಿಗಳನ್ನು ಬೆಳೆಸುತ್ತೇವೆ. ಬೇಕಾದರೆ ನಮ್ಮದನ್ನೇ ನೀವು ಕಿತ್ತುಕೊಂಡು ಹೋಗಿ ಎಂದು ಹೇಳಿದರು. ಅವರು ಇದೇ ಉತ್ತರ ಕೊಟ್ಟರು. ನಾನು ಸುಳ್ಳು ಹೇಳುವುದಿಲ್ಲ. ಅವತ್ತೂ ಕೂಡ ಜಯಚಂದ್ರರವರು ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದರು. ಅವರಿಗೂ ನಾನು ಇನ್‌ಸಿಸ್ಟ್ ಮಾಡಿದೆ. See Food Process Industry is a very important sector. ಎಲ್ಲಿ ಹಣ್ಣು ಹಂಪಲು ಬೆಳೆಯುತ್ತಾರೆ, ಅಲ್ಲಿಗೆ ಕೊಡಿ, ನಮ್ಮ ಅಭ್ಯಂತರವಿಲ್ಲವೆಂದು ಹೇಳಿದ್ದೆ. ಅವತ್ತು ಪ್ರೆಷರ್ ಮಾಡಿದ್ದಕ್ಕೆ, ಬಿಜಾಪುರ ಜಿಲ್ಲೆಗೆ ಕೊಡುತ್ತೇವೆಂದು ಹೇಳಿದರು, ಅದರಂತೆ ನಾವು ಬಿಜಾಪುರಕ್ಕೆ ಕೊಡುತ್ತಾರೆಂದು ತಿಳಿದುಕೊಂಡಿದ್ದೆವು- ಕಾಗೋಡು ತಿಮ್ಮಪ್ಪನವರೆ, ನೋಡಿದರೆ, ಆಮೇಲೆ ಅದು ಬಾಲಕೋಟೆಗೆ ಹೋಯಿತು. ಈ 6 ಫುಡ್ ಪ್ರೋಸೆಸಿಂಗ್ ಪಾರ್ಕ್‌ನಲ್ಲಿ ಒಂದೊಂದು ಫುಡ್ ಪ್ರೊಸೆಸಿಂಗ್ ಪಾರ್ಕ್‌ಗೆ 35 ಕೋಟಿ ರೂಪಾಯಿ ಖರ್ಚಾಗುತ್ತಿದೆ. ಸೆಂಟ್ರಲ್ ಮತ್ತು ಸ್ಟೇಟ್ ಕಾಂಟ್ರಿಬ್ಯೂಷನ್ ಸೇರಿ 35 ಕೋಟಿ ರೂಪಾಯಿಗಳಾಗುವುದಿಲ್ಲವೆ?

ಶ್ರೀ ಆರ್.ವಿ. ದೇಶಪಾಂಡೆ:- ಈ ಫುಡ್ ಪ್ರೊಸೆಸಿಂಗ್ ಪಾರ್ಕ್ ಇದೆಯಲ್ಲ ಇದಕ್ಕೆ ಕೇಂದ್ರ ಸರ್ಕಾರ ಮಾನ್ಯತೆ ಕೂಡಬೇಕಾಗುತ್ತದೆ. ಫುಡ್ ಪ್ರೋಸೆಸಿಂಗ್ ಎಂದರೆ ಫ್ರೂಟ್ಸ್ ಅಷ್ಟೇ ಅಲ್ಲ. ಕೊಚ್ಚಿನ್‌ನಲ್ಲಿ ಸೀ ಫುಡ್ ಪ್ರೋಸೆಸಿಂಗ್ ಪಾರ್ಕ್ ಇದೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಮದ್ದೂರು, ಮಂಡ್ಯದಲ್ಲಿ ನೀವು ಸೀ ಫುಡ್ ಪ್ರೋಸೆಸಿಂಗ್ ಪಾರ್ಕ್ ಮಾಡುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ:- ನಾನು ಮೊನ್ನೆ ನೋಡಿ ಬಂದೆ. ಗೌರವಾನ್ವಿತ ಸದಸ್ಯರ ಗಮನ ಸೆಳೆಯುತ್ತಿದ್ದೇನೆ, ಫ್ರೂಟ್ಸ್ ಎಂದರೆ ಫುಡ್ ಪ್ರೋಸೆಸಿಂಗ್ ಪಾರ್ಕ್ ಅಲ್ಲ. Even sea food, if it is processed, there could be a park. ಕೇಂದ್ರ ಸರ್ಕಾರ ಒಂದು ಡೆಫನೇಷನ್ ಇದೆ, we have to fail in line with Government of India ಅದರ ಪ್ರಕಾರ, ನಾವು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಮಾಡಿದ್ದೇವೆ. ಅವರು ಬಿಜಾಪುರಕ್ಕೆ ಕೇಳುತ್ತಿದ್ದಾರೆ. it is a very serious matter. We will consider Bijapur very seriously.

ಶ್ರೀ ಶಿವಾನಂದ ಎಸ್ ಪಾಟೀಲ್:- ರಾಜ್ಯ ಹಾನಿಗೀಡಾಗುತ್ತದೆ.

ಅಧ್ಯಕ್ಷರು:- ಕೇಳಿದ್ದೀರಿ. ಆಯಿತಲ್ಲಾ.

ಶ್ರೀ ಶಿವಾನಂದ ಎಸ್ ಪಾಟೀಲ್:- ಅರ್ಜೆಂಟ್ ಏನಿದೆ?

ಶ್ರೀ ಜಗದೀಶ್ ಶೆಟ್ಟರ್:- ಯಾರು ಮಾತನಾಡುತ್ತಾರೆ. ಅವರಿಗೆ ಅವಕಾಶ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಇಂಡಸ್ಟ್ರಿಯಲ್ ಪಾಲಿಸಿ ಬಿಲ್ ಬರುತ್ತಿದೆ, ಅದರ ಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಶಿವಾನಂದ ಎಸ್. ಪಾಟೀಲರು ಚಟಕ್ಕೋಸ್ಕರ ಮಾತನಾಡುತ್ತಿಲ್ಲ ಬಿಲ್ ಬರುತ್ತದೆ. ಇಂಡಸ್ಟ್ರಿಯಲ್ ಪಾಲಿಸಿ ಬಿಲ್ ಅನ್ನು ದೇಶಪಾಂಡೆಯವರೇನು ಇಂಟ್ರಡ್ಯೂಸ್ ಮಾಡಿದ್ದಾರೆ. ಅದನ್ನು ಹಾಗೆಯೇ ಚರ್ಚೆ ಇಲ್ಲದೆ ಪಾಸ್ ಮಾಡಬಹುದು. ಏಕೆಂದರೆ, ಅದು ಅಮೀಬಾ ಇದ್ದ ಹಾಗೆ. ಯಾವ ಶೇಪ್ ಬೇಕಾದರೂ ತೆಗೆದುಕೊಳ್ಳುತ್ತದೆ. ಇದು ಸ್ಪೆಸಿಫಿಕ್. ಸ್ಟಾಂಪ್ ಡ್ಯೂಟಿ ಎಗ್ಜೆಂಪ್ಷನ್ ಅನ್ನು ಇವರಿಗೆ ಇಷ್ಟ ಬಂದವರಿಗೆ ಕೊಡುವುದದಕ್ಕೆ ಮಾಡಿರುವುದು. 250 ಕೋಟಿ ರೂಪಾಯಿಗಳೆಂದರೆ 6 ವರ್ಷಗಳಿಗೆ 2,600 ಕೋಟಿ ರೂಪಾಯಿಗಳಾಗುತ್ತದೆ. ಬೇಕು ಬೇಕಾದವರಿಗೆ ಸ್ಟಾಂಪ್ ಡ್ಯೂಟಿ ಎಗ್ಜೆಂಪ್ಷನ್ ಕೊಡುವುದಕ್ಕೆ, ಬ್ಲಾಂಕೆಟ್ ಆರ್ಡರ್ಸ್, ಮಿನಿಸ್ಟರ್ ಅಥವಾ ಕ್ಯಾಬಿನೆಟ್‌ಗೆ ತೆಗೆದುಕೊಳ್ಳುವುದಕ್ಕೆ ಮಾಡುತ್ತಿರುವುದನ್ನು ನಾವು ಡಿಬೇಟ್ ಏಕೆ ಮಾಡಬಾರದು? ಕ್ಲಾರಿಫಿಕೇಷನ್ ಇದೆ. ನಾವು ಹೇಳಿರುವುದರಲ್ಲಿ ತಪ್ಪಿರಬಹುದು. ವಿರೋಧಪಕ್ಷದವರು ಮಾತನಾಡಿದಾಗ, ಅನೇಕ ಸಂದರ್ಭಗಳಲ್ಲಿ ಆಡಳಿತ ನಡೆಸುತ್ತಿರುವವರಿಗೆ ಜ್ಞಾನೋದಯವಾಗುತ್ತದೆ. ವಿಥ್‌ಡ್ರಾ ಮಾಡಿದ್ದುಂಟು, ಸರ್ಕಾರವೇ ಅಮೆಂಡ್‌ಮೆಂಟ್‌ಗಳನ್ನು ಮೂವ್ ಮಾಡಿರುವುದುಂಟು, ರೀ-ಕನ್‌ಸಿಡರ್ ಮಾಡಿರುವುದುಂಟು, ಆದುದರಿಂದ, ನಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಬಿಡಿ, ಆಮೇಲೆ ನಿಮ್ಮಿಷ್ಟ, ನಿಮಗೆ ಮೆಜಾರಿಟಿ ಇದೆ, ಮಾಡಿಕೊಳ್ಳಿ. ಶಿವಾನಂದ ಪಾಟೀಲರು ಮಾತನಾಡಿದ ಮೇಲೆ ನಮ್ಮ ಕಡೆಯಿಂದ ಕೆ.ಬಿ. ಮಲ್ಲಿಕಾರ್ಜುನವರು ಮಾತನಾಡುತ್ತಾರೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಮಾನ್ಯ ದೇಶಪಾಂಡೆ ಅವರು ಹೊರಟು ಹೋದರು. ಹಾಗಾದರೆ ನಾನು ಮಾತನಾಡುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಇಂಡಸ್ಟ್ರಿಯಲಿಸ್ಟ್ಸ್‌ಗೆ ಬೆನಿಫಿಟ್ ಕೊಡಲು ದೇಶಪಾಂಡೆಯವರು ಶ್ರೀಕಂಠಯ್ಯನವರ ಮೂಲಕ ಬಿಲ್ ತಂದಿದ್ದಾರೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಇವತ್ತು ನೀವು ಹೌಸ್‌ನಲ್ಲಿ ಬಹಳ ಅನ್ಯಾಯ ಮಾಡುತ್ತಿದ್ದೀರಿ. ನೀವು ಅವರನ್ನು ಒಂದು ದಿವಸವಾದರೂ ಕೂಡಿಸಿದ್ದಿದ್ದರೆ, ಜನರಿಗೆ ನ್ಯಾಯ ಸಿಗುತ್ತಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಸಿಂಧ್ಯರವರು, ಇವರು ಗ್ರೀನ್ ಕಾರ್ಡ್ ಹೋಲ್ಡರ್, ಯಲ್ಲೋ ಕಾರ್ಡ್ ಹೋಲ್ಡರ್ ಎಂದು ಹೇಳಿದರು. ಇವರು ಅಮೆರಿಕನ್ ಗ್ರೀನ್ ಕಾರ್ಡ್ ಹೋಲ್ಡರ್.

ಶ್ರೀ ಶಿವಾನಂದ ಎಸ್ ಪಾಟೀಲ್:- ಇನ್‌ಫೋಸಿಸ್‌ಗೆ ಏಳೂವರೆ ಸಾವಿರ ಕೋಟಿ ರೂಪಾಯಿಗಳ ಆದಾಯವಿದೆ. ಅವರಿಗೆ ಟ್ಯಾಕ್ಸ್ ಹಾಲಿಡೇ ಕೊಟ್ಟರೆ ರಾಜ್ಯ ಉದ್ಧಾರವಾಗುತ್ತದೆಯೇ? ಅಜೀಂ ಪ್ರೇಮ್‌ಜಿಗೆ ಟ್ಯಾಕ್ಸ್ ಹಾಲಿಡೇ ಕೊಟ್ಟರೆ, ಟಯೋಟಾದವರಿಗೆ ಕೊಟ್ಟರೆ ನಾವು ಉದ್ಧಾರವಾಗುತ್ತೇವೆಯೇ? ನಾನು ಅವರು ಬಂದಾಗ ಮಾತನಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ):- ಮಾನ್ಯ ಅಧ್ಯಕ್ಷರೆ, ಇಲ್ಲಿ ಗ್ರೀನ್ ಕಾರ್ಡ್ ಹೋಲ್ಡರ್ಸ್‌ಗೆ, ಆಶ್ರಯ ಮನೆಗೆ ಸರ್ಕಾರದಿಂದೇನು ಹಣ ಕೊಡುತ್ತೇವೆ, ಅದನ್ನು

ರಿಜಿಸ್ಟರ್ ಮಾಡಲಿಕ್ಕೆ ಅವರು ಸ್ಟಾಂಪ್ ಡ್ಯೂಟಿ ಕೊಡಬೇಕು. ಅಗ್ರಿಕಲ್ಚರಲ್ ಲ್ಯಾಂಡ್ಸ್ ಅನ್ನು ಸೇಲ್ ಮತ್ತು ಪರ್ಚೇಸ್ ಮಾಡಬೇಕಾದರೆ ಸ್ಟಾಂಪ್ ಡ್ಯೂಟಿ ಕೊಡಬೇಕು. ಇವರು ರೈತರಿಗೆ ಬೆನಿಫಿಟ್ ಕೊಡುತ್ತಿಲ್ಲ. ಇಂಡಸ್ಟ್ರಿಗೆ ನಾವು 250 ಕೋಟಿ ರೂಪಾಯಿಗಳ ಬೆನಿಫಿಟ್ ಕೊಡುವ ಅವಶ್ಯಕತೆ ಏನಿದೆ? ಅವರಿಂದ ರಾಜ್ಯ ಸರ್ಕಾರಕ್ಕೆಷ್ಟು ಆದಾಯವಿದೆ ಎಂದು ಲೆಕ್ಕ ಕೊಡುತ್ತೀರಾ? ಅವರಿಗೆ 250 ಕೋಟಿ ರೂಪಾಯಿಗಳ ಎಗ್ಜೆಂಪ್‌ಷನ್ ಕೊಡಬೇಕಾದರೆ, ರಾಜ್ಯದ ಬೊಕ್ಕಸಕ್ಕೆ ಅದರಿಂದ ಎಷ್ಟು ಲಾಭವಿದೆ ಎಂದು ಲೆಕ್ಕ ಕೊಡದಿದ್ದರೆ, ನಾವು ಈ ಬಿಲ್ ಅನ್ನು ಪಾಸ್ ಮಾಡುವುದು ಹೇಗೆ? ನಿಮ್ಮಲ್ಲೀ ಕಾಂಟ್ರಡಿಕ್ಷನ್ ಇದೆ. ತಾವು, ಕೋರ್ ಏರಿಯಾ, ಬ್ಯಾಕ್‌ವರ್ಡ್ ಏರಿಯಾ ಎನ್ನುತ್ತೀರಿ. ದೇಶಪಾಂಡೆಯವರು, ಕೋರ್ ಸೆಕ್ಟಾರ್ ಬಿಟ್ಟು ಟ್ರೇಡಿಂಗ್, ಇಂಡಸ್ಟ್ರಿ, ಅಗ್ರಿಕಲ್ಚರ್ ಎಂದು ಹೇಳುತ್ತಾರೆ. ಅಗ್ರಿಕಲ್ಚರ್‌ನಲ್ಲಿ ಎಗ್ಜೆಂಪ್‌ಷನ್ ಇಲ್ಲ. ಇಂಡಸ್ಟ್ರಿಗೆ ಮಾತ್ರ ಎಗ್ಜೆಂಪ್‌ಷನ್ ಇದೆ. ಕೇವಲ ಬ್ಯಾಕ್‌ವರ್ಡ್ ಏರಿಯಾಗಾದರೆ ನಾವು ಒಪ್ಪಿಗೆ ಕೊಡುತ್ತೇವೆ. ಬ್ಯಾಕ್‌ವರ್ಡ್ ಏರಿಯಾದಲ್ಲಿ ಇನ್‌ಫೋಸಿಸ್, ವಿಪ್ರೋ ದವರನ್ನು ಹಾಕುವುದಾದರೆ, ಅಥವಾ ವೊಲ್ವೋ ಇಂಡಸ್ಟ್ರಿಯನ್ನು ತೆಗೆದುಕೊಂಡು ಹೋಗುವುದಾದರೆ, ಈ ಸದನ ಒಪ್ಪಿಗೆ ಕೊಡುತ್ತದೆ. ಆದರೆ, ಬೆಂಗಳೂರು ಸುತ್ತ ಅಂಥ ದೊಡ್ಡ ದೊಡ್ಡ ಇಂಡಸ್ಟ್ರಿ ಬರುವುದು, ಅವರಿಗೆ ರಾಜ್ಯಸರ್ಕಾರದ 4ನೇ ಆದಾಯವಾದ ಸ್ಟ್ಯಾಂಪ್ ಡ್ಯೂಟಿ ಎಗ್ಜೆಂಪ್‌ಷನ್ ಕೊಟ್ಟರೆ ಹೇಗೆ? ನಾನು ಕಳೆದ ಬಾರಿ ಇದೇ ಸದನದಲ್ಲಿ, ಕಳೆದ ವರ್ಷ ಬಡ್ಜೆಟ್ ಪಾಸ್ ಮಾಡಿದ ಮೇಲೆ ಈ ವರ್ಷದವರೆಗೆ ಎಷ್ಟು ಎಗ್ಜೆಂಪ್‌ಷನ್ ಕೊಟ್ಟಿದ್ದೀರೆಂದು ಪ್ರಶ್ನೆ ಕೇಳಿದ್ದೆ. 2,800 ಕೋಟಿ ರೂಪಾಯಿಗಳ ಎಗ್ಜೆಂಪ್‌ಷನ್ ಕೊಟ್ಟಿದ್ದೀರಿ. ಹಾಗಾದರೆ ಡಿಫಿಸಿಟ್ ಎಷ್ಟಾಯಿತೆಂದರೆ 1,800 ಕೋಟಿ ರೂಪಾಯಿಗಳಾಗುತ್ತದೆ. ಇಷ್ಟು ಎಗ್ಜೆಂಪ್‌ಷ್‌ನ್ ಕೊಡುತ್ತಾ ಹೋದರೆ, ನಿಮಗೆ ಹಣ ಎಲ್ಲಿಂದ ಬರುತ್ತದೆ? ಈ ಒಂದು ಬಿಲ್ ಅನ್ನು ಪಾಸ್ ಮಾಡಬೇಡಿ. ಈ ಬಿಲ್ ಪಾಸ್ ಮಾಡಿದರೆ. ಪುನಃ ಮುಂದಿನ ದಿನಗಳಲ್ಲಿ ನಮ್ಮ ರೈತರಿಗೆ ಏನೂ ಸಿಗುವುದಿಲ್ಲ. ದೇಶಪಾಂಡೆಯವರು ಹಿಂದಿನ ಸರ್ಕಾರವಿದ್ದಾಗಲೂ ಅವರೇ ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದರು. ಇವತ್ತೂ ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದಾರೆ. ಮುಂದೆ ಏನಾಗುತ್ತದೋ ಗೊತ್ತಿಲ್ಲ. ಅವರು ಇಂಥ ಪಾಲಿಸಿಗಳನ್ನು ಮುಂದೆ ತೆಗೆದುಕೊಂಡು ಹೋಗುತ್ತಿದ್ದರೆ ಹೇಗೆ?

ಶ್ರೀ ಶಿವಾನಂದ ಎಸ್ ಪಾಟೀಲ್:- ಅವರು ನಾಳೆ ಕೇಂದ್ರಕ್ಕೂ ಹೋದರೂ ಆಶ್ಚರ್ಯವಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಇಂಡಸ್ಟ್ರಿಯಲಿಸ್ಟ್ಸ್‌ಗೋಸ್ಕರ, ರೆವಿನ್ಯೂನಲ್ಲಿ ಏಕೆ ಎಗ್ಜೆಂಪ್‌ಷನ್ ಕೊಡುತ್ತೀರಿ? ತಾವು ಆ ಒಂದು ದೋಷವನ್ನು ತಮ್ಮ ಮೈಮೇಲೆ ಹಾಕಿಕೊಳ್ಳಬೇಡಿ. ಅವರು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಪಾಲಿಸಿ ಮೂಲಕ ಏನಾದರೂ ಕೊಡುವುದಾದರೆ ಕೊಡಲಿ. ಈ ಬಿಲ್‌ಗೆ ನಮ್ಮ ವಿರೋಧವಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು):- ಮಾನ್ಯ ಅಧ್ಯಕ್ಷರೆ, ಒಂದಂತೂ ತೀರ್ಮಾನವಾಯಿತು. ಆ ಸರ್ಕಾರ, ಈ ಸರ್ಕಾರ, ಆ ಕಾಲ, ಈ ಕಾಲ, ಯಾವ ಕಾಲದಲ್ಲಿಯೂ ಕೈಗಾರಿಕಾ ನೀತಿಗೆ ಒಂದೇ ಕಾಲ, ಅದು ದೇಶಪಾಂಡೆ ಕಾಲ. ಏಳೂವರೆ ವರ್ಷಗಳಿಂದ ಕಂಟಿನ್ಯೂಯಸ್ ಆಗಿ ಅವರೇ ಮಾಡಿಕೊಂಡು ಬರುತ್ತಿದ್ದಾರೆ. ಈಗ ದೇಶಪಾಂಡೆ ಕಾಲ ನಡೆಯುತ್ತಿದೆ. ನಡೆಯಲಿ. ಈ ಬಿಲ್ ಪಾಸ್ ಮಾಡಬೇಕೆಂದಿದ್ದರೆ, ಅದು ಕೋರ್ ಏರಿಯಾ

ಅಥವಾ ಕೋರ್ ಸೆಕ್ಟಾರ್ ಎಂಬುದು ತೀರ್ಮಾನವಾಗಬೇಕು. ಈ ಬಿಲ್ ಮೂವ್ ಮಾಡಿರುವ ಕಂದಾಯ ಸಚಿವರು, ಇದು ಕೋರ್ ಏರಿಯಾ, ಹಿಂದುಳಿದ ಪ್ರದೇಶದಲ್ಲಿದೆ. ಅಲ್ಲಿ ಇಂಡಸ್ಟ್ರಿ ಮಾಡಿದರೆ ನಾವು ಕೊಡುತ್ತೇವೆಂದು ಹೇಳುತ್ತಾರೆ. ದೇಶಪಾಂಡೆಯವರು, ಅದು ಕೋರ್ ಸೆಕ್ಟಾರ್ ಆಗಿದೆ. ಎಲ್ಲೆಲ್ಲಿ ಮಾಡುತ್ತಾರೆ ಅಲ್ಲಿಗೆ ಕೊಡುತ್ತೇವೆಂದೂ ಬೆಂಗಳೂರಿನಲ್ಲಾದರೂ ನಾವು ಕೊಡುತ್ತೇವೆಂದು ಹೇಳಿದರು. ಈ ದ್ವಂದ್ವ ನಮಗೆ ತೀರ್ಮಾನವಾಗುವವರೆಗೆ ಈ ಬಿಲ್ ಅನ್ನು ತಾವು ತಡೆಹಿಡಿಯಬೇಕು.

1.10 ಪಿ.ಎಂ

ನಿಮಗೆ ಅಧಿಕಾರವಿದೆ. ಅದನ್ನು ಚಲಾಯಿಸಿ, ಇದನ್ನು ನೀವು ತಡೆಹಿಡಿಯಬೇಕು. ಈ ಸಬ್ಜೆಕ್ಟ್ ತೀರ್ಮಾನವಾಗುವವರೆಗೆ ಇದನ್ನು ತಡೆಹಿಡಿಯಬೇಕೆಂಬ ಮನವಿ ಮಾಡುತ್ತೇನೆ.

ಅಧ್ಯಕ್ಷರು:- ಸ್ಟಾಂಪ್ ಡ್ಯೂಟಿಯನ್ನು ಕೆಲವರಿಗೆ ಎಗ್ಜೆಂಪ್‌ಷನ್ ಕೊಡುವುದರಿಂದ ಸುಮಾರು 10 ಸಾವಿರ ಜನರಿಗೆ ಅಲ್ಲಿ ಕೆಲಸ ಸಿಗುತ್ತದೆಂದು ನಾನು ಯಾವುದೋ ಪತ್ರಿಕೆಯಲ್ಲಿ ಓದಿದ ಜ್ಞಾಪಕ.

ಶ್ರೀ ಶಿವಾನಂದ ಎಸ್ ಪಾಟೀಲ್:- ಪತ್ರಿಕಾ ಹೇಳಿಕೆಗಳನ್ನು ಈ ಸಬೆಯಲ್ಲಿ ತರಬೇಡಿ ಎಂದು ನೀವೇ ಹೇಳುತ್ತೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಒಂದು ಪಟ್ಟಿಯನ್ನು ತರಿಸಿ.

(ಗೊಂದಲ)

ಅಧ್ಯಕ್ಷರು:- ಪತ್ರಿಕೆಯಲ್ಲಿ ಓದಿದ್ದನ್ನು ತಮ್ಮ ಗಮನಕ್ಕೆ ತಂದೆ ಅಷ್ಟೇ. ನೀವು ಮುಂದುವರಿಸಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಈ ವಿಧೇಯಕವನ್ನು ನಾವು ಪಾಸ್ ಮಾಡಿದರೆ, ರಾಜ್ಯ ಸರ್ಕಾರಕ್ಕೆ 250 ಕೋಟಿ ರೂಪಾಯಿ ಲಾಸ್ ಆಗುತ್ತದೆ. ಸ್ಟಾಂಪ್ ಎಗ್ಜೆಂಪ್‌ಷನ್ ಅನ್ನು ಕಳೆದ 10-15 ವರ್ಷಗಳಿಂದ ಕೊಡುತ್ತಾ ಬಂದಿದ್ದಾರೆ. ಸ್ಟಾಂಪ್ ಎಗ್ಜೆಂಪ್‌ಷನ್ ಕೊಟ್ಟು, ನಮಗೆ ಸ್ಟಾಂಪ್ ಡ್ಯೂಟಿಯಲ್ಲಿ ನೇರವಾಗಿ ಎಷ್ಟು ಲಾಸ್ ಆಗಿದೆ. ಅದನ್ನು ಬೇರೆ ಯಾವ ರೂಪದಲ್ಲಿ ಸರ್ಕಾರ ಭರಿಸಿ, ರಾಜ್ಯಕ್ಕೆ ಅನುಕೂಲ ಮಾಡಿದೆ ಎಂದು ಹೇಳಿದ ಮೇಲೆ, ಮುಂದೆ ಈ ರೀತಿಯಾಗಿ 250 ಕೋಟಿ ರೂಪಾಯಿಗಳನ್ನು ಕಳೆದ 6 ವರ್ಷಗಳಲ್ಲಿ ಲಾಸ್ ಮಾಡಿದರೆ, ಇಷ್ಟು ಎಂಪ್ಲಾಯ್‌ಮೆಂಟ್ ಜನರೇ ಆಗುತ್ತದೆ. ಎಷ್ಟು ಇಂಡಸ್ಟ್ರಿಯಲ್ ಪ್ರೊಡೆಕ್ಷನ್ ಜಾಸ್ತಿ ಆಗುತ್ತದೆ. ಎಕ್ಸ್‌ಕೋರ್ಟ್ ಜಾಸ್ತಿಯಾಗುತ್ತದೆ. ಎಂದು ಏಕ್ಸ್‌ಪ್ಲೇನ್ ಮಾಡದೆ, ವಿಧೇಯಕವನ್ನು ಇಟ್ಟರೆ ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ. ಆದುದರಿಂದ, ಆ ಬಗ್ಗೆ ಎಕ್ಸ್‌ಪ್ಲೇನ್ ಮಾಡಿದರೆ, ಒಪ್ಪಲಿಕ್ಕಾಗುತ್ತದೆ. ಇದೊಂದು, ಜನರಲ್ ಪವರ್ ಆಫ್ ಅಟಾರ್ನಿ ಇದ್ದ ಹಾಗೆ. ಯಾರು ಏನು ಬೇಕಾದರೂ ಬರೆದುಕೊಳ್ಳಬಹುದು. ಎಸ್.ಪಿ. ಮುದ್ದಹನುಮೇಗೌಡರ ಅಧ್ಯಕ್ಷತೆಯಲ್ಲಿನ ಅಧೀನ ಶಾಸನ ರಚನಾ ಸಮಿತಿಯಲ್ಲಿ ನಾವು ವ್ಯಾಪಕವಾಗಿ ಚರ್ಚಿಸಿದ್ದೆವು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ನಮ್ಮ ಸ್ನೇಹಿತರು ಬಹಳ ದೀರ್ಘವಾಗಿ ಚರ್ಚಿಸುತ್ತಿದ್ದಾರೆ. ಬಹಳ ಸಂತೋಷವೇನೆಂದರೆ, ತಾವು ಈ ಶಾಸನ ರಚನೆಗೆ ಹೆಚ್ಚು ಒತ್ತು ಕೊಟ್ಟು ಸದಸ್ಯರಿಗೆ ಅವಕಾಶ ಕೊಡುತ್ತಿದ್ದೀರಿ. I am greatful to you ಒಂದೇ ಒಂದು ವಾದ ಬಂದಿದೆ. because he mentioned about our discussion in the Committee on Subordinate Legislation-just I would like to mention only on point.

ನಾವು ಅವತ್ತು ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಸೆಕ್ರೆಟರಿಯವರನ್ನು ಸಮಿತಿಯ ಮುಂದೆ ಕರೆಸಿದ್ದೆವು. He gave a convincing reason on giving exemption of taxes ಇಷ್ಟು ಕೊಟ್ಟರೆ ಹೇಗೆಂಬ ಪ್ರಶ್ನೆಯನ್ನು ಅವತ್ತು ಕಾರ್ಯದರ್ಶಿಯವರ ಮುಂದಿಟ್ಟಾಗ, ಅವರು ಕನ್‌ವಿನ್ಸಿಂಗ್ ರೀಸನ್ ಕೊಟ್ಟರು. It is inevitable for the State. because there is heavy competition among other States. ಪಕ್ಕದ ರಾಜ್ಯಗಳಾದ ಆಂಧ್ರ, ತಮಿಳುನಾಡು, ಮಹಾರಾಷ್ಟ್ರದವರು ನಾವು ಇನ್ನೂ ಹೆಚ್ಚು ನಿಮಗೆ ಸಬ್ಸಿಡಿ ಕೊಡುತ್ತೇವೆ. ವಿನಾಯಿತಿ ಕೋಡುತ್ತೇವೆ. ತೆರಿಗೆ ವಿನಾಯಿತಿ ಕೊಡುತ್ತೇವೆ. ಸ್ಟಾಂಪ್ ಡ್ಯೂಟಿ ಎಗ್ಜೆಂಪ್‌ಷನ್ ಕೊಡುತ್ತೇವೆ. ಇನ್‌ಫ್ರಾಸ್ಟ್ರಕ್ಚರ್‌ಗೆ ನಾವು ಸಾಕಷ್ಟು ಪ್ರೋತ್ಸಾಹ ಕೊಡುತ್ತೇವೆ you can come invest here ಎಂದು ಹೆಚ್ಚು ಕಾಂಪಿಟಿಷನ್ ಮಾಡುತ್ತಿರುವುದರಿಂದ, it is inevitable for the State Government to invite them and give them maximum exemptions. Mr. B.S. Patil gave a really convincing answers before the committee. ಹಾಗಾಗಿ, ನಾವು ಅನೇಕ ಸರ್ಕಾರಿ ಆದೇಶಗಳನ್ನು ಒಪ್ಪುವ ಪರಿಸ್ಥಿತಿ ನಿರ್ಮಾಣವಾಯಿತು. Just I would like to remind out hon. friend Mr. Mallikarjun who was also one of the members of the Committee; that is what We discussed in the Committee.

ಶ್ರೀ ಶಿವಾನಂದ ಎಸ್. ಪಾಟೀಲ್:- ಮುದ್ದಹನುಮೇಗೌಡರೆ, ನಿಮಗೆ ಕನ್‌ವಿನ್ಸ್ ಆಗಿದ್ದರೆ, ಇದನ್ನು ಇನ್ನೂ ಏನಾದರೂ ಬೆಂಗಳೂರು ರೂರಲ್, ಅರ್ಬನ್, ಮೈಸೂರು ಚಿಕ್ಕಮಗಳೂರು ಬಿಟ್ಟು, ತುಮಕೂರಿಗೆ ಬರುತ್ತಿದ್ದರೆ, ನಾವು ಒಪ್ಪುತ್ತೇವೆ. ಈ ಎರಡು ಜಿಲ್ಲೆಗಳ ಎಗ್ಜೆಂಪ್ಟ್ ಮಾಡಿ, ಅವರಿಗೆ ಪರ್ಮಿಷನ್ ಕೊಡುವುದಾದರೆ, ಕಂದಾಯ ಮಂತ್ರಿಗಳಿಗೆ ಬಿಟ್ಟು ಬಿಡೋಣ.

(ಗೊಂದಲ)

ಅಧ್ಯಕ್ಷರು:- 4-5 ಜನ ಸದಸ್ಯರು ಒಟ್ಟಿಗೇ:ಮಾತನಾಡಿದರೆ ಬರೆದುಕೊಳ್ಳಬೇಡಿ.

Sri S.P. Muddahanumegowda:- We must take State as A Unit; not the Districts.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಎಲ್ಲಿ ಆಗುತ್ತದೆ. ಮತ್ತೆ ಅಲ್ಲಿಯೇ ಆಗುತ್ತದೆ. ಎಲ್ಲಿ ಡೆವಲಪ್‌ಮೆಂಟ್ ಮಾಡುವುದೋ ಅಲ್ಲಿಯೇ ಎಗ್ಜೆಂಪ್ಟ್ ಕೊಡುವುದು.

ಅಧ್ಯಕ್ಷರು:- ಬ್ಯಾಕ್‌ವರ್ಡ್ ಏರಿಯಾ ಒಂದು ಮೆನ್‌ಷನ್ ಮಾಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅಲ್ಲಿ ಬರುವ ಕೈಗಾರಿಕೆಗಳಿಗೆ ಹಾಸನ ಮತ್ತು ಧಾರವಾಡಕ್ಕೆ ಕೇಂದ್ರ ಸರ್ಕಾರ ಮೂವತ್ತ ಮೂರು ಒನ್‌ಥರ್ಡ್ ಪರ್ಸೆಂಟ್ ಸಬ್ಸಿಡಿ ಕೊಟ್ಟಿದೆ. ಈ ವರ್ಷ ಸ್ಪೆಷಲ್ ಆಗಿ ಸ್ಪೆಷಲ್ ಇಂಡಸ್ಟ್ರಿಯಲ್ ಜೋನ್ ಎಂದು ತೀರ್ಮಾನಿಸಿದ್ದಾರೆ. ಇವತ್ತು ಬರುವ ಇಂಡಸ್ಟ್ರಿಗಳು, ಧಾರವಾಡ ಮತ್ತು ಹಾಸನಕ್ಕೆ ಹೋಗಿಯೇ ತೀರಬೇಕು. ಬೇಕಾದ ಕಡೆ ಹೋಗಲು ಸಾಧ್ಯವಿಲ್ಲ, ಗ್ರೋಥ್ ಸೆಂಟರ್ಸ್ ಹೊಸಕೋಟೆಹತ್ತಿರ ವೋಲ್ವೋ ಮಾಡಿದರು. it is a core area. ಬಿಡದಿ ಹತ್ತಿರ ಟಯೋಟಾ ಕಂಪನಿ ಮಾಡಿದರು, - it is a core area. ಬೆಂಗಳೂರು ಸುತ್ತಮುತ್ತ ಇದ್ದರೆ ಅದು ಅಭಿವೃದ್ಧಿಯಾಗಿದೆಯೇ? ಈ ರೀತಿ ಎಲ್ಲಿ

ಸ್ಪೆಷಲ್ ಇನ್ಸೆಂಟೀವ್ ಸಿಗುತ್ತದೆ. ಅಲ್ಲಿಗೆ ಈ ಕೈಗಾರಿಕೆಗಳು ಹೋಗಬೇಕು. ಮಾನ್ಯ ಮುದ್ದಹನುಮೇಗೌಡರು ಹೇಳಿದ ಹಾಗೆ, ನಮ್ಮ ನೆರೆ ರಾಜ್ಯಗಳು ಬೇಕಾದಷ್ಟು ಇನ್ಸೆಂಟೀವ್ ಕೊಡುತ್ತವೆ. ನಮಗಿಂತ ಹೆಚ್ಚು ಪ್ರೋತ್ಸಾಹದಾಯಕವಾಗಿದ್ದಾರೆ. ನಮ್ಮ ರಾಜ್ಯಕ್ಕೆ ಬರುವ ಇಂಡಸ್ಟ್ರಿಗಳು ಅದು ಬ್ಯಾಕ್‌ವರ್ಡ್ ಏರಿಯಾಗೆ ಬರುವುದು ಹಾಸನ ಮತ್ತು ಧಾರವಾಡಕ್ಕೆ ಕೊಡಬೇಕೆಂದು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಯಾವ ಪ್ರಾಜೆಕ್ಟ್ ಬರಬೇಕಾದರೂ ಆ ಸ್ಥಳವನ್ನು ತೋರಿಸುತ್ತಾರೆ. ಇನ್‌ಫ್ರಾಸ್ಟ್ರಕ್ಚರ್ ರೆಡಿ ಇದೆ. ಅವರಿಗೆ ನಾವು ಕನ್‌ಸೆಷನ್ ಕೊಡುವುದರಿಂದ, ಅದಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ನಾನು ಎರಡು ಕ್ಲಾರಿಫಿಕೇಷನ್ ಕೇಳಿದ್ದೆ. ಮೂರನೇ ಕ್ಲಾರಿಫಿಕೇಷನ್ ಏನೆಂದರೆ, ಹಿದೆ 10-15 ವರ್ಷಗಳಿಂದ ಸ್ಟಾಂಪ್ ಡ್ಯೂಟಿ ಎಗ್ಜೆಂಪ್‌ಷನ್ ಕೊಡುತ್ತಾ ಬಂದಿದ್ದಾರೆ. ಯಾವ ಸ್ಟಾಂಪ್ ಡ್ಯೂಟಿ ಎಗ್ಜೆಂಷ್‌ಷನ್ ಕೊಟ್ಟಿರುವುದರಿಂದ, ನಾವು ಅಧೀನ ಶಾಸನ ರಚನಾ ಸಮಿತಿಯಲ್ಲಿ ನೋಡಿದ್ದೇವೆ. ಸ್ಟಾಂಪ್ ಡ್ಯೂಟಿ ಎಗ್ಜೆಂಪ್‌ಷನ್ ತೆಗೆದುಕೊಂಡು, ಲ್ಯಾಂಡ್ ರಿಜಿಸ್ಟರ್ ಮಾಡಿಸಿಕೊಂಡಿರುವ ಇಂಡಸ್ಟ್ರಿಗಳು ಇನ್ನೂ ಪ್ರಾರಂಭವಾಗಿಲ್ಲ. ಅದನ್ನೇನಾದರೂ ನೀವು ಲೆಕ್ಕ ತೆಗೆದಿದ್ದೀರಾ ಈ ರೀತಿಯಾಗಿ ನೀವು ಲೆಕ್ಕ ತೆಗೆಯದೆ ಹೋದರೆ, ಏನೂ ಹೇಳದಿದ್ದರೆ, ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮುಂದೆ ಈ ರೀತಿ ಕೊಡುತ್ತಾ ಹೋದರೆ, ತಪ್ಪಾಗುತ್ತದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ದೊಡ್ಡ ಕೈಗಾರಿಕೆ ಪೈಕಿ, ಟಯೋಟಾ ಕಂಪನಿಯವರು ಎಗ್ಜೆಂಪ್‌ಷನ್‌ಗೆ ಈಗ ಅಪ್ಲೈ ಮಾಡಿದ್ದಾರೆ. ವೋಲ್ವೋ ಇಂಡಸ್ಟ್ರಿ ಸ್ಟಾರ್ಟ್ ಆದ ಹತ್ತಾರು ವರ್ಷಗಳ ಮೇಲೆ ಈಗ ಅವರು ಅಪ್ಲೈ ಮಾಡಿದ್ದಾರೆ. ಅದಕ್ಕೆ ಸರ್ಕಾರ ಇತ್ತೀಚೆಗೆ ಕೊಡುತ್ತಿದೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ:- ಆದರರ್ಥ, ಎಗ್ಜೆಂಪ್‌ಷನ್ ಕೊಡದೆ, ಅವರು ಬಂದಿದ್ದಾರೆ. ನೀವು ಕೊಡುತ್ತೀರಿ ಎಂದು ಅಪ್ಲೈ ಮಾಡಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ನಾವು ಅವರಿಗೆ ಎಗ್ಜೆಂಪ್‌ಷನ್ ಕೊಡುತ್ತೇವೆಂದು ಅಧಿಕೃತವಾಗಿ ಹೇಳಿದ ಮೇಲೆ ಅವರು ಬಂದಿದ್ದಾರೆ. ಮೊದಲೇ ಆ ಕಂಡೀಷನ್ ಹಾಕಿರುತ್ತಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಏಕೋ ನಮ್ಮ ಅಧ್ಯಕ್ಷರು ದೇವರಿದ್ದ ಹಾಗಿದ್ದಾರೆ. ಎಲ್ಲದಕ್ಕೂ ಅವಕಾಶ ಕೊಡುತ್ತಿದ್ದೀರಿ. ನಮಗೆ ಖುಷಿಯಾಗುತ್ತಿದೆ. ಯಾವ ಇಂಡಸ್ಟ್ರಿಗೆ ಕೊಡುತ್ತೇವೆ. ಎಷ್ಟು ಕೊಡುತ್ತೇವೆ ಎಂಬ ಬಗ್ಗೆ ಏನೂ ಸ್ಪಷ್ಟವಿಲ್ಲ. ಒಂದು ತರಹ, ಜನರಲ್ ಪವರ್ ಆಫ್ ಅಟಾರ್ನಿ ಇದ್ದ ಹಾಗಿದೆ. ಫಾರ್ಮೆಟ್ ಇದ್ದ ಹಾಗಿದೆ. ಫಿಲ್-ಅಪ್ ದಿ ಬ್ಲಾಂಕ್ಸ್ ಮಾಡಿಕೊಂಡು ಯಾರಿಗೆ ಬೇಕಾದರೂ ಕನ್‌ಸೆಷನ್ ಕೊಡುವ ವಾತಾವರಣವಿದೆ. ಅದಕ್ಕೆ ಮೂರನೆಯ ಕ್ಲಾರಿಫಿಕೇಷನ್‌ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಒಂದು ಸ್ಕೂಲಿಗೆ ನಾವು ಸ್ಟಾಂಪ್ ಎಗ್ಜೆಂಪ್‌ಷನ್ ಕೇಳಿದರೆ ಇವತ್ತಿನ ದಿವಸ ಕೊಡುವುದಿಲ್ಲ. ಮಾಡುತ್ತೇವೆಂದು ಅದು ಮಾಡಿಲ್ಲ.

ಶ್ರೀ ಎಸ್.ಎಸ್ ಪಾಟೀಲ್:- ನಮ್ಮಲ್ಲಿ ಎಜ್ಯುಕೇಷನ್ ಇನ್ಸ್‌ಟಿಟ್ಯೂಷನ್ಸ್‌ಗೆ ದಾನಪತ್ರವೆಂದು ಮಾಡುತ್ತಾರೆ. ಅದಕ್ಕೆ ಎಗ್ಜೆಂಪ್‌ಷನ್ ಕೊಡುತ್ತಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಷುಗರ್ ಫ್ಯಾಕ್ಟರಿಗಳಿಗೆ ಕೊಡುತ್ತಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಎಜ್ಯುಕೇಷನ್ ಇನ್ಸ್‌ಟಿಟ್ಯೂಷನ್ಸ್‌ಗೆ ಎಗ್ಜೆಂಷ್‌ಷನ್ ಕೊಟ್ಟಿದ್ದೇವೆ. ಅನೇಕ ಸಾರ್ವಜನಿಕ ಇನ್ಸ್‌ಟಿಟ್ಯೂಷನ್ಸ್‌ಗೆ ನಾವು ಎಗ್ಜೆಂಪ್‌ಷನ್ ಕೊಡುತ್ತಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ರೂರಲ್‌ನಲ್ಲಿ ಬರುವ ಷುಗರ್ ಫ್ಯಾಕ್ಟರಿಗೆ ಎಗ್ಜೆಂಪ್‌ಷನ್ ಕೊಡುತ್ತೀರಾ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಅದಕ್ಕೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಯಾವುದಕ್ಕೋಸ್ಕರ ನಾವು ಕೊಡುತ್ತೇವೆ. ಯಾವ ಕೋರ್ ಸೆಕ್ಟಾರ್‌ಗೆ ಕೊಡುತ್ತೇವೆ. ಯಾವ ಜಾಗದಲ್ಲಿ ಕೊಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸರ್ಕಾರಕ್ಕೆ ಮನಸ್ಸಿಗೆ ಬಂದ ಹಾಗೆ, ನಿರ್ದಿಷ್ಟ ಪಡಿಸುತ್ತೇವೆಂದು ಹೇಳಿದರೆ ಅವ್ಯವಹಾರಕ್ಕೆ ಮೂಲವಾಗುತ್ತದೆ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ಬಿಲ್ ಪಾಸ್ ಮಾಡಬಾರದೆಂಬ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಸದಸ್ಯರೇನು ಪ್ರಶ್ನೆ ಕೇಳಿದರು, ಅದಕ್ಕೆ ಏನಾದರೂ ಉತ್ತರ ಹೇಳುತ್ತೀರಾ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಸ್ಪಷ್ಟವಾಗಿ ಕೋರ್ ಏರಿಯಾ ಬಗ್ಗೆ ಹೇಳಿಲ್ಲ. ಆದುದರಿಂದ ಇದನ್ನು ತಡೆಹಿಡಿಯಬೇಕು.

ಅಧ್ಯಕ್ಷರು:- ಒಂದೂ ಬಿಲ್ ಅನ್ನು ಪಾಸ್ ಮಾಡದಿದ್ದರೆ ಹೇಗೆ? ಆಗಿರುವುದು ಒಂದೇ ಒಂದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಇದನ್ನು ನೀವೇ ತಡೆಹಿಡಿಯಬಹುದು. ಇದನ್ನು ವಾಪಸ್ ತೆಗೆದುಕೊಂಡು, ಪೂರ್ಣ ಚಿಂತನೆಮಾಡಿ, ನಂತರ ವಿಧೇಯಕ ಮಂಡಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್:- ಕೋ-ಆಪರೇಟಿವ್ ಷುಗರ್ ಫ್ಯಾಕ್ಟರಿಗೆ ಜಮೀನು ಖರೀದಿಸಿದರೆ, ಅದಕ್ಕೆ ಸ್ಟಾಂಪ್ ಡ್ಯೂಟಿ ಹಾಕುತ್ತೀರಿ. ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ಸ್‌ಗೆ ಮಾಡುತ್ತೇವೆಂದು ಹೇಳಿದ್ದಿರಿ. ಇದರಲ್ಲಿ ಅದನ್ನು ಕೊಡುತ್ತಿಲ್ಲ. ದಾನ ಕೊಟ್ಟಿರುವ ಪತ್ರಕ್ಕೆ ಖರೀದಿಯ ರೇಟ್ ಏನಿರುತ್ತದೆ ಅದನ್ನೇ ಹಾಕುತ್ತೀರಿ ಖಾಸಗಿ ಸಂಸ್ಥೆಗಳಲ್ಲಿ ದಾನ ಕೊಟ್ಟಿರುವಂಥವುಗಳಿಗೆ ಕೂಡ ಸ್ಟಾಂಪು ಹಾಕುತ್ತೀರಿ ಅದಕ್ಕೆ ಅದನ್ನು ತೆಗೆಯಬೇಕು.

ಶ್ರೀ ಶಿವಾನಂದ ಎಸ್ ಪಾಟೀಲ್:- ಈ ಬಿಲ್ ದೇಶಪಾಂಡೆಯವರದ್ದು ಇದೆ ಅವರು ಹೊರಗೆ ಹೋಗಿರುವುದರಿಂದ ಈಗ ಪಾಸ್ ಮಾಡುವುದು ಬೇಡ, ಅವರು ಬಂದ ಮೇಲೆ ಮಾಡೋಣ. ಈ ಬಿಲ್ ಶ್ರೀಕಂಠಯ್ಯನವರದ್ದು ಅಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಇದರಲ್ಲಿ ಯಾರಿಗೋ ಸಹಾಯ ಮಾಡಬೇಕೆನ್ನುವ ಉದ್ದೇಶವಿಟ್ಟುಕೊಂಡು ಇದನ್ನು ಮಾಡುತ್ತಿದ್ದೀರಿ. 250 ಕೋಟಿ ರೂ ನಾಳೆ ಇನ್ನೂ ಜಾಸ್ತಿಯಾಗಬಹುದು, ನಿಮದೆ ಬೋನಾಫೈಡ್ ಇದ್ದರೆ ನಿಮಗೆ ನಿಜವಾಗಿಯೂ ಇಂಡಸ್ಟ್ರಿಗಳನ್ನು ಬೆಳೆಸಬೇಕೆನ್ನುವುದಿದ್ದರೆ ಬ್ಯಾಕ್‌ವರ್ಡ್ ಡಿಸ್ಟ್ರಿಕ್ಸ್‌ಗಳೆಂದು ನೀವು ಐಡೆಂಟಿಫೈ ಮಾಡಿ. ಕೋರ್ ಏರಿಯಾ ಎಂದರೆ ಇಂಪಾರ್ಟಟೆಂಟ್ ಏರಿಯಾ. ಇದು ಎಲ್ಲಿ ಅನುಕೂಲವಾಗುತ್ತದೆ ಎಂದರೆ ಬೆಂಗಳೂರಿಗೆ ಅನುಕೂಲವಾಗುತ್ತದೆ. ಅಂಥ ಕಡೆ ಸಹಾಯ ಮಾಡಿದಂತಾಗುತ್ತದೆ. ಇದರಿಂದ ನಮಗೆ ಏನು ಅನ್ನಿಸುತ್ತದೆ ಎಂದರೆ. ಇವತ್ತಿಗೂ ನಮಗೆ ಸಂಶಯ ಇದೆ. ಇದರ ಬಗ್ಗೆ ನೀವು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ನೀವು ಇವತ್ತು ಯಾರಿಗೋ ಅನುಕೂಲ ಮಾಡಿಕೊಡುವ ಸಲುವಾಗಿ ಈ ಬಿಲ್ ಅನ್ನು ತಂದಿದ್ದೀರಿ. ಎಗ್ಜ್ಂಷನ್ ಮಾಡಿಕೊಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದೀರಿ, ವೆಸ್ಟೆಂಡ್ ಇಂಟ್ರೆರೆಸ್ಟ್‌ಗೆ ಅನುಕೂಲ ಮಾಡಿಕೊಡಬೇಕೆಂದು, ಹಾಗೂ ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಅನುಕೂಲ ಮಾಡಬೇಕೆಂದು ಮಾಡಿದ್ದೀರಿ. ಇವತ್ತು ರೂರಲ್

ಏರಿಯಾದಲ್ಲಿ ಯಾವ ಇಂಡಸ್ಟ್ರಿಗಳೂ ಬೆಳೆಯುವುದಿಲ್ಲ. ರೈತರಿಗೆ ಅನುಕೂಲ ಮಾಡುವಂಥದ್ದು ಆಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ದಯಮಾಡಿ ಈ ಬಿಲ್ಲನ್ನು ವಾಪಸ್ ತೆಗೆದುಕೊಂಡು, ಕೆಲವೊಂದು ಬ್ಯಾಕ್‌ವರ್ಡ್ ಏರಿಯಾಗಳಿಗೆ ಸ್ಟಾಂಪು ಎಗ್ಜ್ಂಷನ್ ಮಾಡುತ್ತೇವೆ. ಇಂಥವುಗಳನ್ನು ಮೊದಲು ಮಾಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಸನ್ಮಾನ್ಯ ಮುದ್ದಹನುಮೇಗೌಡರವರು ಹೇಳಿದ ಉದೇಶ ಬಹಳ ಮುಖ್ಯವಾಗಿರುವಂಥದ್ದು. ಕೈಗಾರಿಕೆಗಳು ಬೇರೆ ರಾಜ್ಯಗಳಿಗೆ ಹೋಗದ ಹಾಗೆ ಅವರಿಗೆ ಪ್ರೋತ್ಸಾಹ ಕೊಡಲಿಕ್ಕೆ ಹಾಗೂ ಇಂಡಸ್ಟ್ರೀಗಳು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಸ್ಥಾಪನೆಯಾಗುವುದಕ್ಕೆ ಈ ಒಂದು ಮಸೂದೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ತಾವೆಲ್ಲರೂ ಇದನ್ನು ದಯಮಾಡಿ ಒಪ್ಪಿ ಪಾಸ್ ಮಾಡಿಕೊಡಿ.

ಶ್ರೀ ಪಿ.ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಆಪಾದನೆಗಳನ್ನು ಅನೇಕ ಸಂದರ್ಭದಲ್ಲಿ ಮಾಡಿದ್ದೇನೆ. ಇದು ಆ ಸರ್ಕಾರ ಈ ಸರ್ಕಾರ ಅವರ ಆಳ್ವಿಕೆ ಇವರ ಆಳ್ವಿಕೆ ಎನ್ನುವುದಕ್ಕಿಂತಲೂ ಹಿರಿಯ ಸಚಿವರುಗಳು ಇಲ್ಲಿ ಇದ್ದಾರೆ ಅವರಿಗೆಲ್ಲಾ ಗೊತ್ತಿದೆ. ಯಾರಾದರೂ ಒಬ್ಬ ದಾನಿಗಳು ತಮ್ಮ ಜಮೀನನ್ನು ಶಿಕ್ಷಣ ಸಂಸ್ಥೆಗಳಿಗೆ ದಾನವಾಗಿ ಕೊಟ್ಟರೆ, ಅದಕ್ಕೆ ಸ್ಟಾಂಪ್ ಡ್ಯೂಟಿ ಎಗ್ಜ್ಂಷನ್‌ಗೆ ಒಂದು ಲಿಮಿಟ್ ಇರುತ್ತದೆ. ಆ ಲಿಮಿಟ್ ಒಳಗಡೆ ಕೊಡಲಿಕ್ಕೆ ಆಗದೇ ಹೋದರೆ ಅದು ಕ್ಯಾಬಿನೆಟ್‌ಗೆ ಬರಬೇಕಾಗುತ್ತದೆ. ನಾವು ಮುಂಚೆಯಿಂದಲೂ ಹೇಳುತ್ತಿದ್ದೇವೆ. ಈ ಸರ್ಕಾರ ಸದುದ್ದೇಶದಿಂದ ಇದನ್ನು ತಂದಿಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಈ ಸರ್ಕಾರ ಇದನ್ನು ಬಹಳ ದುರುದ್ದೇಶದಿಂದ, ಕರ್ನಾಟಕ ರಾಜ್ಯ ಸರ್ಕಾರದ ಮುಂದಿನ ಆರು ವರ್ಷಗಳ ಭವಿಷ್ಯಕ್ಕೆ ಮಾರಕವಾಗತಕ್ಕಂಥ, ಸುಮಾರು 2000 ಕೋಟಿ ರೂಪಾಯಿಗಿಂತ ಹೆಚ್ಚಿನ ಹಣ ಬೊಕ್ಕಸಕ್ಕೆ ನಷ್ಟವಾಗತಕ್ಕಂಥ ಕಾನೂನನ್ನು, ಈ ಮಸೂದೆಯನ್ನು ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಸರ್ಕಾರ ಇದನ್ನು ವಾಪಸ್ ತೆಗೆದುಕೊಳ್ಳಲು ಒಪ್ಪುತ್ತಿಲ್ಲ. ನಾವು ಇದಕ್ಕೆ ಭಾಗಿಯಾಗಲು ತಯಾರಿಲ್ಲ. ನಾವು ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳ(ಯು) ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಮಂತ್ರಿಗಳು ಈಗಲಾದರೂ ಇದರ ಬಗ್ಗೆ ಗಮನಹರಿಸಬೇಕು. ತಕ್ಷಣವೇ ಇದನ್ನು ವಿತ್‌ಡ್ರಾ ಮಾಡಿಕೊಂಡು ಪುನಃ ರೀಕನ್ಸಿಡರ್ ಮಾಡಿ, ಏಕೆಂದರೆ, ಇದರಿಂದಾಗಿ ಭಯಂಕರ ಅನಾಹುತಗಳಾಗುತ್ತವೆ ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಹಾಗೂ ದೊಡ್ಡ ದೊಡ್ಡ ಶ್ರೀಮಂತರಿಗೆ ಅನುಕೂಲ ನೀವು ಮಾಡಿಕೊಡುತ್ತಿದ್ದೀರಿ. ಈಗಲಾದರೂ ನೀವು ಇದನ್ನು ವಿತ್ ಡ್ರಾ ಮಾಡಿ ಕೊಳ್ಳಬೇಕು. ಬಹುಶಃ ಸರ್ಕಾರ ಇದಕ್ಕೆ ಸ್ಪಂಧಿಸುತ್ತಿಲ್ಲ. ಇದನ್ನು ನಾವು ಪ್ರತಿಭಟಿಸುತ್ತೇವೆ. ಈ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):- ಮಾನ್ಯ ಅಧ್ಯಕ್ಷರೆ, ಇವರು ಏಕೆ ಸಭಾತ್ಯಾದ ಮಾಡುತ್ತಾರೋ ನನಗೆ ಗೊತ್ತಿಲ್ಲ. ಸರ್ಕಾರ ಒಂದು ಒಳ್ಳೆಯ ಮಸೂದೆ ತಂದಾಗ ಇದೇ ಪ್ರಕಾರ ನೀವು ಮಾಡಿ, ಆಗ ನಿಮಗೆ ಒಳ್ಳೆಯ ಪಬ್ಲಿಸಿಟಿ ಸಿಗಬಹುದು. ಮತ್ತೊಂದು ಸಿಗಬಹುದು ಎಂದು ತಿಳಿದು ಕೊಂಡರೆ ಅದು ಸಾಧ್ಯವಿಲ್ಲ. ಏಕೆಂದರೆ,

ಸರ್ಕಾರ ಹೊಸದಾಗಿ ಏನೂ ಮಾಡುತ್ತಿಲ್ಲ. 25 ವರ್ಷಗಳಿಂದ ಕರ್ನಾಟಕದಲ್ಲಿ ಈ ರೀತಿಯಾಗಿ ನಡೆಯುತ್ತಿದೆ. ಹೊಸದಾಗಿ ನಾವೇನೂ ತರುತ್ತಿಲ್ಲ. ನನ್ನ ಸ್ನೇಹಿತರು ಈ ಕಡೆ ಕುಳಿತಾಗ ಅವರೇ ಇಂಥ ಬಿಲ್‌ಗಳು, ಆ್ಯಕ್ಟ್‌ಗಳನ್ನು ಪಾಸ್ ಮಾಡಿಕೊಂಡಿದ್ದಾರೆ. ಇವತ್ತು ಇದಕ್ಕೆ ಇವರು ಏಕೆ ವಿರೋಧಿಸುತ್ತಾರೋ ನನಗೆ ಗೊತ್ತಿಲ್ಲ. ನಮ್ಮ ಕೈಗಾರಿಕಾ ನೀತಿಯನ್ನು ತಾವು ನೋಡಬೇಕು; ಹೊಸ ಕೈಗಾರಿಕಾ ನೀತಿಯಲ್ಲಿ ನಾವು ಬಹಳ ಕ್ಲಿಯರಾಗಿ ಹೇಳಿದ್ದೇವೆ. Key Projects in Core Areas ಇದಕ್ಕೆ ಹೊಸ ನೀತಿ ಜನರ ಕೈಯಲ್ಲಿದೆ ಹಾಗೂ ಅಪೋಜಿಷನ್‌ನವರ ಕೈಯಲ್ಲಿ ಇದೆ. ನಾವು ಏನೂ ಹೊಸದಾಗಿ ತರುತ್ತಿಲ್ಲ. This has come into force on 1.4.2001. There is nothing new here. ಅದರ ಪ್ರಕಾರ ಅನ್‌ಕ್ಚರ್-2 ನಲ್ಲಿ ವಾಟ್ ಈಸ್ ಕೋರ್ ಪ್ರಾಜೆಕ್ಟ್ ಎನ್ನುವುದನ್ನು ಕೊಟ್ಟಿದ್ದೇವೆ. ಎಲ್ಲಾ ಟ್ರಾನ್ಸ್‌ಫರೆಂಟ್ ಇದೆ. ಎಲ್ಲಾ ಸ್ಪಷ್ಟವಾಗಿ ಇದೆ. ಅನಾವಶ್ಯಕವಾಗಿ ಹೀಗೆ ಮಾಡಿದರೆ ಹೇಗೆ? ಯಾವ ಮಸೂದೆಗಳಿಗೆ ಇವರೇ ಇಲ್ಲಿ ಕುಳುತುಕೊಂಡು ಪಾಸ್ ಮಾಡಿಕೊಂಡಿದ್ದಾರೆ. ಅದಕ್ಕೆ ಇವರು ವಿರೋಧ ಮಾಡುವುದು ಸರಿಯಲ್ಲ ಇದು ನಿಜವಾದ ವಿರೋಧವೂ ಅಲ್ಲ,ಕೇವಲ ವಿರೋಧಿಸಲಿಕ್ಕೆ ಸಭಾತ್ಯಾಗ ಮಾಡುತ್ತಿದ್ದಾರೆಯೇ ವಿನಹ ಅವರಿಗೆ ಕೂಡ ಮನಸ್ಸಿನಲ್ಲಿ ಗೊತ್ತಿದೆ. ಇದು ನಾವು ಮಾಡಿದ್ದೇವೆ ಒಳ್ಳೆಯ ಮಸೂದೆ ಎಂದು ಕೇಂದ್ರ ಸರ್ಕಾರ ಇವತ್ತೇನು ಮಾಡುತ್ತಿದೆ? ಹೆಜ್ಜೆ ಹೆಜ್ಜೆಗೂ ಕನ್‌ಸೆಷನ್ ಕೊಡುತ್ತಿದೆ. ಏಕೆ ಕೊಡುತ್ತಿದೆ? ವಿರೋಧ ಪಕ್ಷದ ನಾಯಕರು ಇದಕ್ಕೆ ಮೊದಲು ಉತ್ತರ ಕೊಡಬೇಕು. Export Oriented Industries ಗೆ ಮೊದಲು ನೀವು ಹೇಳಿದ್ದೀರಿ. they will be entitled to only for five years; again you have extended for five years. Again you have extended for five years. ಅದರಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಹೆಚ್ಚಿಗೆ ಕೊಡುತ್ತೀರಿ? ಏಕೆ? ಆ ಉದ್ದೇಶವನ್ನು ನಾವು ಚಾಲೆಂಜ್ ಮಾಡುವುದಿಲ್ಲ. ಒಳ್ಳೆಯ ಉದ್ದೇಶವಿದೆ. ಕೈಗಾರಿಕೆ ಬೆಳೆಯಬೇಕು, ಎಂಪ್ಲಾಯಿಮೆಂಟ್ ಬೆಳೆಯಬೇಕು. ರಾಜ್ಯದ ಆರ್ಥಿಕ ಅಭಿವೃದ್ಧಿಯಾಗಬೇಕು. ಹಾಗಾಗಿ ಕೇಂದ್ರ ಸರ್ಕಾರ ಇವತ್ತೇನು ಉದಾರೀಕರಣ ನೀತಿ ತರುತ್ತದೆ. ಕೋಕೋಕೋಲಕ್ಕೆ ಏಕೆ ಕೊಟ್ಟಿರಿ ಎಂದು ಕೇಳುತ್ತಾರೆ? who allowed Coco Cola to come to Karnataka? It is Government of India. who permitted them to put investments here? F.D.I. Clearance is done by Government of India. ರಾಜ್ಯ ಸರ್ಕಾರಕ್ಕೆ ಯಾವುದೇ ಹತೋಟಿ ಇಲ್ಲ. ಪೆಪ್ಸಿ ಯಾರು ಕ್ಲಿಯರ್ ಮಾಡಿದ್ದು? ಗೌರ್ನಮೆಂಟ್ ಆಫ್ ಇಂಡಿಯಾ. ಅವರು ಕ್ಲಿಯರ್ ಮಾಡಿದರೆಂದು ನಮ್ಮ ಕಡೆಗೆ ಬಂದರು. ಮಲ್ಟಿನ್ಯಾಷನಲ್ ಕಂಪನಿಗಳು ಬರಬಾರದು ಎನ್ನುವುದಾದರೆ ನಾನು ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ವಿನಂತಿ ಮಾಡುತ್ತೇನೆ. ತಾವು ತಮ್ಮ ನೀತಿಯನ್ನು ದಿಲ್ಲಿಯಲ್ಲಿ ಬದಲಾವಣೆ ಮಾಡಿ, ಆಗ ಇಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮಗೂ ಕೂಡ ನೋವಾಗುತ್ತದೆ. ಇವತ್ತು ಗುಲ್ಬರ್ಗಾದಲ್ಲಿ ಕೈಗಾರಿಕೆಗಳು ಬರಬೇಕು. ತಮ್ಮ ಕೋಲಾರದಲ್ಲಿ ಬರಬೇಕು, ಇದೇ ಸರ್ಕಾರದ ಉದ್ದೇಶ. ಕೈಗಾರಿಕೆಗಳು ಬರಬೇಕೆಂದು ನಾವು ಎಲ್ಲರೂ ಪ್ರಯತ್ನಿಸುತ್ತೇವೆ. ಆದರೆ ಯಾವ ಮಾಲೀಕರು ಕೈಗಾರಿಕೆ ಹಾಕುತ್ತಾರೆ ಅವರು ಅವರ ಲಾಭ ನೋಡುತ್ತಾರೆ. ಬೆಂಗಳೂರಿನಲ್ಲಿ ಏನಾಗಿದೆ ಎಂದರೆ, ಎಲ್ಲಾ ಮೂಲಭೂತ ಸೌಕರ್ಯಗಳು ಇವೆ, ಒಳ್ಳೆಯ ರಸ್ತೆಗಳಿವೆ, ವಿದ್ಯುಚ್ಛಕ್ತಿ ಇದೆ. ರಾ ಮೆಟಿರಿಯಲ್ ಸಿಗುತ್ತದೆ. ಒಳ್ಳೆಯ ಹ್ಯೂಮನ್ ರಿಸೋರ್ಸಸ್ ಸಿಗುತ್ತದೆ. ಏರ್ ಪೋರ್ಟ್ ಇದೆ. So they concentrate in Bangalore ನಾವೂ ಸಹ ಇಡೀ ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳು ಬೆಳೆಯಬೇಕೆಂದು ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. May be mini-Airports, air strips ಇರಬಹುದು, ನಮ್ಮ ಧರ್ಮಸಿಂಗ್‌ರವರು ಪ್ರಯತ್ನ ಮಾಡಿ ವಿಶ್ವಬ್ಯಾಂಕಿನಿಂದ ಹಣ ತಂದು ಎಲ್ಲಾ ಕಡೆ ಒಳ್ಳೆಯ ರಸ್ತೆಗಳನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಹೀಗೆ ಮೂಲಭೂತ ಸೌಲಭ್ಯಗಳು ಎಲ್ಲಿ ಬೆಳೆಯುತ್ತೇವೆ ಅಲ್ಲಿ ತಾನೇತಾನಾಗಿ ಕೈಗಾರಿಕೆಗಳು ಅಲ್ಲಿಗೆ ಬರುತ್ತವೆ. ಹಾಗಾಗಿ ಈ ಕೀ-ಪ್ರಾಜೆಕ್ಟ್‌ನಲ್ಲಿ ಬೆನಿಫಿಟ್ಸ್ ಸಿಗುವುದು ಬಿ,ಸಿ,ಡಿ ಏರಿಯಾಗಳಲ್ಲಿ, ಎ. ಏರಿಯಾದಲ್ಲಿ ಅಂದರೆ ಬೆಂಗಳೂರು ಅರ್ಬನ್‌ದಲ್ಲಿ ನಾವು ಯಾವುದೇ ಇನ್‌ಸೆಂಟೀವ್ ಕೊಡುತ್ತಿಲ್ಲ. ಟಯೋಟಾದವರಿಗೆ, ವೋಲ್ವೋದವರಿಗೆ ಕೊಟ್ಟೆವು, ಹಿಂದಿನ ಸರ್ಕಾರಗಳು ಕೊಟ್ಟವು, ಏಕೆ ಕೊಟ್ಟವು? ನಾನೇ ಮಂತ್ರಿಯಾಗಿದ್ದೆ, ಏಕೆಂದರೆ, ಇವತ್ತು ಸಾವಿರಾರು ಜನ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಟಯೋಟಾದವರು ರೆವಿನ್ಯೂ ಎಕ್ಸೈಜ್ ಅನ್ನು ಗೌರ್ನಮೆಂಟ್ ಆಫ್ ಇಂಡಿಯದವರಿಗೆ ಏನು ಕೊಡುತ್ತಾರೆ. ಅದರಲ್ಲಿ Crores of rupees revenue is coming to Karnataka State. Toyoto is a pride today in the country. Toyoto is in Karnataka and it is a pride to Karnataka. Volvo is a pride to Karnataka; in the country. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗಿ ವಿನಂತಿ. ಇವತ್ತು ಹೆಚ್ಚಿನ ಸೌಲಭ್ಯಗಳನ್ನು ಬೇರೆಯವರು ಕೊಡುತ್ತಿಲ್ಲ ಅಷ್ಟೇ ಅಲ್ಲ, it was in A group. only if the investment is more than Rs. 100 crores, if it is a minor project and if it comes within the definition of 'Core'; then only very rarely we will give. Otherwise, all these will be applicable to B,C,D, groups ಅಂದರೆ, ಕೋಲಾರ, ಬೆಳಗಾವಿ, ಗ್ರೋಥ್ ಸೆಂಟರ್ಸ್, ಚಿಕ್ಕಮಗಳೂರು ಬೆಂಗಳೂರು ಬಂದಾಗ it should be more than Rs. 100 crores. ಹಾಗಾಗಿ ಉದ್ದೇಶಪೂರ್ವಕವಾಗಿ, ಅನಾವಶ್ಯಕವಾಗಿ, ಇವರು ಮಾಡುವುದು ಸರಿಯಲ್ಲ. ನಾನು ಇದನ್ನು ಯುನಾನಿಮಸ್ ಆಗಿ ಪಾಸ್ ಆಗುತ್ತದೆಂದು ತಿಳಿದಿದ್ದೆ. ಇವರು ಪ್ರತಿ ದಿನ ಸಣ್ಣ ಕೈಗಾರಿಕೆಗಳು ಅನಾರೋಗ್ಯವಾಗಿವೆ. 350 ಕೋಟಿ ರೂಪಾಯಿಗಳ ಸಬ್ಸಿಡಿ ಏಕೆ ಕೊಟ್ಟಿಲ್ಲವೆಂದು ಹೇಳುತ್ತಾರೆ. ಆದರೆ ಇವತ್ತು ಇವರು ಇನ್‌ಸೆಂಟಿವ್ ಕೊಡಬಾರದು ಎಂದು ಹೇಳುತ್ತಾರೆ. ಹಾಗಾದರೆ ಸಬ್ಸಿಡಿ ಏಕೆ ಕೇಳುತ್ತೀರಿ? Subsidy is not an incentive? ಯಾವಾಗ ಬೇಕೆಂದಾಗ ಗಾಳಿ ಬಂದಾಗ ಮಾತನಾಡಬಾರದು, ಸ್ಪಷ್ಟವಾದ ನೀತಿ ಇರಬೇಕಾಗುತ್ತದೆ. ಕ್ಲಾರಿಟಿ ಇರಬೇಕಾಗುತ್ತದೆ. ಅದು ಇವತ್ತು ಅಪೋಜಿಷನ್‌ನಲ್ಲಿ ಇಲ್ಲವೆಂದು ಬಹಳ ಸ್ಪಷ್ಟವಾಗಿ ಅಷ್ಟೇ ವಿನಯದಿಂದ ಹೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ(ದೊಡ್ಡಬಳ್ಳಾಪುರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ನಾನೇನು ಕೇಳುತ್ತೇನೆಂದರೆ ಬೇರೆ ರಾಜ್ಯಗಳಲ್ಲಿ ಸಬ್ಸಿಡಿ ಕೊಡುತ್ತಿರುವುದರಿಂದ ನಮ್ಮ ರಾಜ್ಯದಲ್ಲಿ ಕೊಡ ಕೊಟ್ಟು ಕೈಗಾರಿಕೆಗಳನ್ನು ತರಬೇಕು ಇದೊಂದು ಸದುದ್ದೇಶ. ಆದರೆ ನಮ್ಮಲ್ಲಿ ಏನಾಗಿದೆ? ಸಬ್ಸಿಡಿ ಪಡೆದುಕೊಂಡು ಜಮೀನನ್ನು ತೆಗೆದುಕೊಂಡು, ಸರ್ಕಾರದಿಂದ ಬರುವ ಎಲ್ಲಾ ಸವಲತ್ತುಗಳನ್ನು ತೆಗೆದುಕೊಂಡು, ಅರ್ಧದಲ್ಲಿಯೇ ಆ ಇಂಡಸ್ಟ್ರಿಯನ್ನು ಮುಚ್ಚಿಬಿಟ್ಟು, ಆ ಕಾರ್ಮಿಕರನ್ನು ಬೀದಿಪಾಲು ಮಾಡಿದಾಗ ಸಚಿವರು ಏನು ಮಾಡುತ್ತಾರೆ? ಆದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಲ್ಲವೆ? ನನ್ನ ತಾಲ್ಲೂಕಿನಲ್ಲಿ ಎಲ್ಲಾ ಬೆನಿಫಿಟ್ಸ್ ತೆಗೆದುಕೊಂಡು ಸಬ್ಸಿಡಿ

ತೆಗೆದುಕೊಂಡು ಅರ್ಧಕ್ಕೆ ಇಂಡಸ್ಟ್ರಿಗಳನ್ನು ಮುಚ್ಚಿಕೊಂಡು ಹೋಗಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳೇನು ಹೇಳುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ಕೆಲವು ಸಾರಿ ಏನಾಗುತ್ತದೆ ಎಂದರೆ ಇನ್‌ಫ್ರಾಸ್ಟಕ್ಚರ್ ಕೊಡುವಾಗ ಕೆಲವು ಸಾರಿ ಜಮೀನುಗಳನ್ನು ಕೊಡುತ್ತೇವೆ. ಹೊಸ ಕೈಗಾರಿಕೆಗಳು ಬಂದಂಥ ಸಂದರ್ಭದಲ್ಲಿ ಅವರಿಗೆ ಲ್ಯಾಂಡ್ ಅಕ್ವೈಯರ್ ಮಾಡಿಕೊಂಡು ಕೊಡತಕ್ಕಂಥದ್ದು ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಿವೆ. ಆದರೆ ಒಂದು ಕಂಡೀಷನ್ ಹಾಕಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಅನೇಕ ಇಂಡಸ್ಟ್ರಿಗಳು under the guise of failure of industry, they are changing and they are converting that land for other purposes. A Condition must be imposed that the land for which purpose it is given, that must be utilised for the same purpose.

ಆ ನಿಂಬಂಧನೆಯನ್ನು ಹಾಕಬೇಕು, ಇಲ್ಲದಿದ್ದರೆ if it is utilised for other purpose. ಅಲ್ಲಿ ಸದುದ್ದೇಶ ಇರುವುದಿಲ್ಲ. ಆದ್ದರಿಂದ, ಈ ಜಮೀನನ್ನು ಬೇರೆ ಯಾವ ಉದ್ದೇಶಕ್ಕೆ ಬಳಸಬಾರದು ಎನ್ನುವ ಕಂಡೀಷನ್ ಕಡ್ಡಾಯ ಮಾಡಬೇಕಾಗುತ್ತದೆ. ಕೈಗಾರಿಕೆ ಏನಾದರೂ ಮತ್ತೆ ಫೇಲ್ಯೂರ್ ಆದಾಗ, ಅದನ್ನು ಬದಲಾವಣೆ ಮಾಡತಕ್ಕಂಥದ್ದು ಅಥವಾ ಬೇರೊಂದು ಉದ್ದೇಶಕ್ಕಾಗಿ ಉಪಯೋಗ ಮಾಡತಕ್ಕಂಥದಾಗಲಿ ಅಥವಾ ರೆಸಿಡೆನ್ಷಿಯಲ್ ಪರ್ಪ್‌ಸ್‌ಗೋಸ್ಕರ ಉಪಯೋಗ ಮಾಡಿಕೊಳ್ಳತಕ್ಕಂಥದ್ದು ಆಗಲಿ ಆದಾಗ ಅಂಥದ್ದಕ್ಕೆ there must be some stringent action against them.

Sri H.C. Srikantaiah: It is already there.

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಕೆ.ಐ.ಡಿ.ಬಿ. ಯವರು ಕೈಗಾರಿಕೆ ಮಾಡುವುದಕ್ಕೆ ಜಮೀನನ್ನು ಕೊಡುತ್ತಾರೆ. ಹಾಗೆಯೇ ಸ್ಮಾಲ್ ಇಂಡಸ್ಟೀಸ್ ಕಾರ್ಪೊರೇಷನ್‌ನವರು ಶೆಡ್ ಅಥವಾ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಜಾಗವನ್ನು ಕೊಡುತ್ತಾರೆ. ಇವರು ಕೊಟ್ಟಿರತಕ್ಕಂಥ ನಿಗದಿತ ಜಾಗದಲ್ಲಿ ಎರಡು ವರ್ಷದೊಳಗೆ ಕೈಗಾರಿಕೆಯನ್ನು ಹಾಕಲೇಬೇಕಾಗುತ್ತದೆ. ಈ ಒಂದು ಕಂಡೀಷನ್ ಅನ್ನು ಅಗ್ರಿಮೆಂಟ್‌ನಲ್ಲಿ ಸ್ಪಷ್ಟಪಡಿಸಲಾಗಿರುತ್ತದೆ. ಆ ಪ್ರಕಾರ ಅವರು ಎರಡು ವರ್ಷದಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡದಿದ್ದರೆ ಮತ್ತೊಂದು ವರ್ಷ ಫೆನಾಲ್ಟಿ ಎಕ್ಸ್‌ಟೆನ್‌ಶನ್ ಕೊಡಲಾಗುತ್ತದೆ. ಒಂದು ವೇಳೆ ಈ ಒಂದು ಅವಧಿಯಲ್ಲಿಯೂ ಕೂಡ ಅವರು ಮಾಡದಿದ್ದರೆ, we give extension on penalty. ಇದಕ್ಕೆ ಸಂಬಂಧಪಟ್ಟಂಥ ಬಿಲ್ ಈಗಾಗಲೇ ಇದೇ ಮನೆಯಲ್ಲಿ ಪಾಸ್ ಮಾಡಿಕೊಂಡಿದ್ದೇವೆ. to take over that land back to KIADB ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೋಸ್ಕರ ಅಥವಾ ಹೌಸಿಂಗ್ ಪರ್ಪಸ್‌ಗೋಸ್ಕರ ಅಥವಾ ಕೈಗಾರಿಕೆಗೋಸ್ಕರ ಭೂಸ್ವಾಧೀನ ಮಾಡಿಕೊಟ್ಟು, ಯಾವ ಉದ್ದೇಶಕ್ಕಾಗಿ ಕೈಗಾರಿಕೆ ಇಲಾಖೆ ಅಥವಾ ಕೆಐಡಿಬಿಯವರು ಲ್ಯಾಂಡ್ ಅಲಾಟ್ ಮಾಡಿರುತ್ತಾರೆಯೋ, ಅದೇ ಉದ್ದೇಶಕ್ಕಾಗಿ ಅದು ಕಡ್ಡಾಯವಾಗಿ ಉಪಯೋಗವಾಗಲೇಬೇಕು. ಒಂದು ವೇಳೆ ಇದನ್ನು ಉಲ್ಲಂಘನೆ ಮಾಡಿದರೆ, the land comes back to the State automatically. ಆದ್ದರಿಂದ, ಇದರ ಬಗ್ಗೆ ಮಾನ್ಯ ಸದಸ್ಯರು ಚಿಂತನೆ ಮಾಡತಕ್ಕಂಥ ಪ್ರಮೇಯ ಇಲ್ಲ ಎನ್ನತಕ್ಕಂಥದನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಕ್ರಮವನ್ನೂ ಸಹ ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ಯಾವ ಒಂದು ಉದ್ದೇಶಕ್ಕಾಗಿ ಜಮೀನನ್ನು ಪಡೆದುಕೊಂಡಿರುತ್ತಾರೆಯೋ, ಆ ಒಂದು ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳದಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥ ಕಾನೂನು ನಮ್ಮಲ್ಲಿಯೂ ಕೂಡ ಇದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಕೈಗಾರಿಕೆಗಳಿಗೆ ನೀವು ಸಹಾಯ ಮಾಡುತ್ತೀರಿ, ಆದರೆ ಅವರು ಸರ್ಕಾರ ಕೊಡತಕ್ಕಂಥ ಸಬ್ಸಿಡಿಯನ್ನು ತೆಗೆದುಕೊಂಡು ಹೊರಟು ಹೋಗುತ್ತಾರೆ. ಎನ್ನತಕ್ಕಂಥದನ್ನು ಮಾನ್ಯ ಕೃಷ್ಣಪ್ಪನವರು ಇಲ್ಲಿ ಪ್ರಸ್ತಾಪ ಮಾಡಿದರು. ಇದು ನಿಜ. ಅದು ನಮ್ಮ ಗಮನಕ್ಕೂ ಬಂದಿದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರುವುದೇನೆಂದರೆ, ಒಂದು ದೊಡ್ಡ ಮೆಗಾ ಪ್ರಾಜೆಕ್ಟ್‌ಗಳು ಬಂದಾಗ ಸ್ಥಳೀಯ ಜನರಿಗೆ ಉದ್ಯೋಗ ಅವಕಾಶ ಕೊಡತಕ್ಕಂಥ ಒಂದು ಕಂಡೀಶನ್ ಹಾಕಿರುತ್ತೇವೆ. ಒಂದು ವೇಳೆ ಈ ಒಂದು ಕೈಗಾರಿಕೆಗಳು ಅದನ್ನು ಪಾಲನೆ ಮಾಡದಿದ್ದಾಗ ಅಥವಾ ನೆಟ್ ವರ್ಕ್ ಲೂಸ್ ಆದಂಥ ಸಂದರ್ಭದಲ್ಲಿ they go to B.I.F.R court. ಅಲ್ಲಿ ಅವನ್ನು ರಿವೈವ್ ಮಾಡಲಿಕ್ಕೆ ಸರ್ಕಾರದಿಂದ ಏನೆಲ್ಲಾ ಸಾಧ್ಯವಿದೆಯೋ ಅದನ್ನೆಲ್ಲಾ ಸರ್ಕಾರ ಮಾಡುತ್ತದೆ. ಹಾಗೆಯೇ ಕಾರ್ಮಿಕರು ಬೀದಿಗೆ ಬರತಕ್ಕಂಥ ಸಂದರ್ಭದಲ್ಲಿ ಕಾರ್ಮಿಕರ ಸಂರಕ್ಷಣೆಗೋಸ್ಕರ ಲೇಬರ್ ಆಕ್ಟ್‌ನಲ್ಲಿ ಕೆಲವು ಪ್ರಾವಿಜನ್‌ಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮಾಡಿದೆ. ಆದ್ದರಿಂದ, ಇದರ ಒಂದು ಬೆನಿಫಿಟ್‌ನ್ನು ಕಾರ್ಮಿಕರಿಗೆ ಕೊಡಲೇಬೇಕಾಗುತ್ತದೆ.

ಶ್ರೀ ಕೆ. ವಿಜಯಕುಮಾರ ಶೆಟ್ಟಿ:- ಹೊಸ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುವುದರಿಂದ ಕರ್ನಾಟಕ ರಾಜ್ಯದ ಜನರಿಗೆ ಕೆಲಸ ಸಿಗುತ್ತದೆ ಎಂದು ಮಾನ್ಯ ಸಚಿವರು ಹೇಳಿದರು. ಇತ್ತೀಚೆಗೆ ಬಂದಿರತಕ್ಕಂಥ ಕೈಗಾರಿಕೆಗಳಲ್ಲಿ ಕರ್ನಾಟಕ ರಾಜ್ಯದ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದಾರೆ ಎನ್ನತಕ್ಕಂಥದನ್ನು ಮಾನ್ಯ ಮಂತ್ರಿಯವರು ಇಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಇಷ್ಟೆಲ್ಲಾ ಬಿನಿಫಿಟ್ ಕೊಟ್ಟರೂ ಸಹ ಕರ್ನಾಟಕ ರಾಜ್ಯದ ಜನತೆಗೆ ಏನೂ ಉಪಯೋಗವಾಗುತ್ತಿಲ್ಲ. ಇವತ್ತಿನ ದಿವಸ ಹೊಸದಾಗಿ ಪ್ರಾರಂಭವಾಗುತ್ತಿರುವ ಕೈಗಾರಿಕೆಗಳಲ್ಲಿ ಬೇರೆ ಬೇರೆ ರಾಜ್ಯದವರಿಗೆ ಕೆಲಸ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಇದಕ್ಕೆ ಸಂಬಂಧಪಟ್ಟಂತೆ ಬೇರೊಂದು ಪ್ರಶ್ನೆ ಕೇಳಿ.

ಶ್ರೀ ಕೆ. ಗೋಪಾಲ ಪೂಜಾರಿ:- ಮಾನ್ಯ ಅಧ್ಯಕ್ಷರೆ, ಮಂಗಳೂರಿನಲ್ಲಿ ಪ್ರಾರಂಭವಾಗಿರತಕ್ಕಂಥ ಕೈಗಾರಿಕೆಗಳಲ್ಲಿ ಈ ರೀತಿಯಾದ ಅನ್ಯಾಯಗಳು ಆಗುತ್ತಿವೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ:- ಇವತ್ತಿನ ದಿವಸ ಸಾಕಷ್ಟು ಬೆನಿಫಿಟ್ ಕೊಡುತ್ತಿದ್ದೇವೆ. ಆದರೆ, ಈ ರೀತಿಯಾದ ಬೆನಿಫಿಟ್ ಕೊಡುತ್ತಿರುವುದು ನನಗೆ ಸಮಾಧಾನವಾಗುತ್ತಿಲ್ಲ.

ಅಧ್ಯಕ್ಷರು:- ಇದಕ್ಕೆ ಸಂಬಂಧಪಟ್ಟಂತೆ ಬೇರೆ ಒಂದು ಪ್ರಶ್ನೆ ಕೇಳಿ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇಂಥ ಬೆನಿಫಿಟ್ ಗಳನ್ನು ಕೊಡುವಾಗ ಈ ರೀತಿಯಾದ ಕೆಲವು ಕಂಡೀಶನ್‌ಗಳನ್ನು ಹಾಕಿಕೊಡಲಿ.

ಇವತ್ತಿನ ದಿವಸ ಎಂಆರ್‌ಪಿಲ್ ಗೆ 12 ವರ್ಷ ಟ್ಯಾಕ್ಸ್ ಹಾಲಿಡೇ ಕೊಟ್ಟಿದ್ದೀರಿ. ಆದರೆ, ಇದಕ್ಕಾಗಿ ಜಾಗಕೊಟ್ಟವರಿಗೆ ಸದರಿ ಕೈಗಾರಿಕೆಗಳಲ್ಲಿ ಇದುವರೆಗೂ ಕೆಲಸ ಕೊಟ್ಟಿಲ್ಲ. ಈ ಸಂದರ್ಭದಲ್ಲಿ ಮತ್ತೊಂದು ವಿಷಯ ಏನೆಂದರೆ, ಖಾಸಗಿ ಕೈಗಾರಿಕೆಗಳಿಗೆ ಜಾಗ ಕೊಟ್ಟ ಮೇಲೆ ಸರ್ಕಾರಕ್ಕೆ ಸದರಿ ಕೈಗಾರಿಕೆಗಳ ಮೇಲೆ ಏನು ಅಧಿಕಾರ ಇದೆ? ಸರ್ಕಾರದ ಯಾವುದೇ ಮಾತನ್ನು ಖಾಸಗಿ ಸಂಸ್ಥೆಯವರು ಕೇಳುತ್ತಿಲ್ಲ.

ಅಧ್ಯಕ್ಷರು:- ತಾವು ಹೇಳಿರತಕ್ಕಂಥ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಆಲೋಚನೆ ಮಾಡುತ್ತದೆ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"2002ರ ಕರ್ನಾಟಕ ಸ್ಟಾಂಪು(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು:- "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲಮೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ

"2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಇ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು